ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ -ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com ಇ-ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:192 ದಿನಾಂಕ:30.10.2025 ಗುರುವಾರ ಪುಟ.4 ಬೆಲೆ:02 ರೂ ಮೊ.9945793175

## ಗುಟ್ಕಾ, ಸಿಗರೇಟ್ ಮಾರದವರಿಗೆ ಬೀದರ್ ನಾಗರಿಕ ಸನ್ಮಾರ್ಗ ಸಮಿತಿಯಿಂದ ಸನ್ಮಾನ




ಬೀದರ್.ಅ.29:ಬೀದರ್ ನಾಗರಿಕ ಸನ್ಮಾರ್ಗ ಸಮಿತಿಯು ಜಿಲ್ಲೆಯನ್ನು ತಂಬಾಕು ಮುಕ್ತಗೊಳಿಸಲು ಅಭಿಯಾನ ಆರಂಭಿಸಿದೆ. ಸಮಿತಿಯು ಪದಾಧಿಕಾರಿಗಳು ಗಾವಾನ್ ಚೌಕ್,ಮುಖ್ಯ ರಸ್ತೆ ಸೇರಿದಂತೆ ನಗರದ ವಿವಿಧೆಡೆ ಬುಧವಾರ ಗುಟ್ಕಾ, ಸಿಗರೇಟ್ ಸೇರಿದಂತೆ ತಂಬಾಕು ಉತ್ಪನ್ನ ಮಾರಾಟ ಮಾಡದ ಅಂಗಡಿಗಳ ಮಾಲೀಕರನ್ನು ಸನ್ಮಾನಿಸಿದರು.

ವ್ಯಕ್ತಿ ಹಾಗೂ ಸಮಾಜದ ಸ್ವಾಸ್ಥ್ಯಕ್ಕೆ ಮಾರಕವಾದ ಉತ್ಪನ್ನಗಳನ್ನು ಮಾರಾಟ ಮಾಡದಿರುವ ಅವರ ಕಾರ್ಯವನ್ನು ಮುಕ್ತ ಕಂಠದಿಂದ ಪ್ರಶಂಶಿಸಿದರು.

ಅಂಗಡಿಗಳ ಮುಂಭಾಗದಲ್ಲಿ 'ನಾವೆಲ್ಲರೂ ಆರೋಗ್ಯಕರ ಜೀವನ ನಡೆಸಲು ನಾವು ಗುಟ್ಕಾ ಮತ್ತು ಸಿಗರೇಟ್ ಮಾರಾಟ ಮಾಡುವುದಿಲ್ಲ' ಎಂಬ ಬರಹದ ಸ್ಟಿಕ್ಕರ್ ಅಂಟಿಸಿದರು.

ಇದಕ್ಕೂ ಮುನ್ನ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟಿ ಅವರು, ಸಮಿತಿಯಿಂದ ಹೊರ ತರಲಾದ ಸ್ಟಿಕ್ಕರ್ ಅನ್ನು ಬಿಡುಗಡೆಗೊಳಿಸಿದರು.ಬೀದರ್ ನಾಗರಿಕ ಸನ್ಮಾರ್ಗ ಸಮಿತಿಯು ಯುವ ಜನರನ್ನು ದುಶ್ಚಟಗಳಿಂದ ದೂರ ಇರಿಸಲು ತಂಬಾಕು ಉತ್ಪನ್ನಗಳ ವಿರುದ್ಧ ಜಾಗೃತಿ ಮೂಡಿಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದರು.ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಬೀದರ್ ನಾಗರಿಕ ಸನ್ಮಾರ್ಗ ಸಮಿತಿ ಸಮಾಜದಲ್ಲಿ ಒಳ್ಳೆಯದನ್ನು ಪರಿಸರಿಸಲು ಹಾಗೂ ಕೆಟ್ಟದನ್ನು ಹೋಗಲಾಡಿಸಲು ವಿವಿಧ ಚಟುವಟಿಕೆಗಳನ್ನು ನಡೆಸಲಿದೆ. ಮೊದಲ ಹಂತದಲ್ಲಿ ಬೀದರ್ ಅನ್ನು ತಂಬಾಕು ಮುಕ್ತಗೊಳಿಸುವ ಅಭಿಯಾನ ಆರಂಭಿಸಲಾಗಿದೆ ಎಂದು ಬೀದರ್ ನಾಗರಿಕ ಸನ್ಮಾರ್ಗ ಸಮಿತಿಯ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ತಿಳಿಸಿದರು.

ಸಮಿತಿಯು ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡದ ವ್ಯಾಪಾರಿಗಳನ್ನು ಸನ್ಮಾನಿಸಿ ಪ್ರೋತ್ಸಾಹಿಸಲಿದೆ. ತಂಬಾಕು ಉತ್ಪನ್ನಗಳ ವಿರುದ್ಧ ಜನ ಜಾಗೃತಿಯ ಸ್ಟಿಕ್ಕರ್, ಪೋಸ್ಟರ್‌ಗಳನ್ನು ಅಂಟಿಸಲಿದೆ. ದೇವರು ಬದುಕುವುದಕ್ಕಾಗಿ ಸಾಕಷ್ಟು ವಸ್ತುಗಳ ಮಾರಾಟಕ್ಕೆ ಅವಕಾಶ ಕೊಟ್ಟಿದ್ದಾನೆ. ಹೀಗಾಗಿ ವ್ಯಾಪಾರಿಗಳು ಜನ ಹಿತದ ವಸ್ತುಗಳನ್ನು ಮಾರಾಟ ಮಾಡಬೇಕು. ಜನರ ಜೀವಕ್ಕೆ ಮಾರಕವಾದ ತಂಬಾಕು ಉತ್ಪನ್ನಗಳ ಮಾರಾಟ ಮಾಡದಿರಲು ಸಂಕಲ್ಪ ತೊಡಬೇಕು. ಶಾಲಾ, ಕಾಲೇಜುಗಳ 100 ಮೀಟರ್ ವ್ಯಾಪ್ತಿಯೊಳಗೆ ತಂಬಾಕು ಉತ್ಪನ್ನಗಳನ್ನು ಮಾರಾಟ ಮಾಡಬಾರದೆಂಬ ನಿಯಮ ಪಾಲಿಸಬೇಕು ಎಂದು ಹೇಳಿದರು.

ಬೀದರ್ ನಗರ ಹಾಗೂ ಜಿಲ್ಲೆಯನ್ನು ತಂಬಾಕು ಉತ್ಪನ್ನ ಮುಕ್ತಗೊಳಿಸಲು ಸಂಘ ಸಂಸ್ಥೆಗಳು ಹಾಗೂ ನಾಗರಿಕರು ಕೈಜೋಡಿಸಬೇಕು ಎಂದು ಮನವಿ ಮಾಡಿದರು.

ಸಮಿತಿಯ ಕಾರ್ಯದರ್ಶಿ ಅಶೋಕ ವಡಗಾವೆ, ಮನೋಹರ ದಂಡೆ, ಅಶ್ಫಾಕ್ ಮೆಟ್ರೊ, ಮೌಲಾನಾ ಸಿರಾಜುದ್ದೀನ್, ಮೌಲಾನಾ ಮೋನಿಸ್ ಕಿರ್ಮಾನಿ, ನಿವೃತ್ತ ಎಇಇ ಮಕ್ಸೂದ್ ಖಾನ್, ಶಂಭುಲಿಂಗ ವಾಲ್ದೊಡ್ಡಿ, ಟೌನ್ ಸಿಪಿಐ, ಪಿಎಸ್ಐ ತಸ್ಲಿಮ್ ಮತ್ತಿತರರು ಇದ್ದರು.

## 1.50 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗೆ ಚಾಲನೆ

ಬೀದರ.ಅ.29:ಕ್ಷೇತ್ರವನ್ನು ಅಭಿವೃದ್ಧಿಯ ಪಥದಲ್ಲಿ ಸಾಗಿಸುವ ನಿಟ್ಟಿನಲ್ಲಿ ಹಗಲಿರುಳು ಶ್ರಮದಲ್ಲಿ ನಾನಿದ್ದೇನೆ. ಜನಸೇವೆ ನನ್ನ ಧ್ಯೇಯವಾಗಿದೆ ಸದಾ ಜನರ ಅನುಕೂಲಕ್ಕಾಗಿ ನನ್ನ ಬದ್ಧತೆಯಾಗಿದೆ ಪ್ರತಿಯೊಂದು ಯೋಜನೆ, ಪ್ರತಿಯೊಂದು ನಿರ್ಧಾರ ಜನರ ಅನುಕೂಲಕ್ಕಾಗಿ ಕೈಗೊಳ್ಳಲಾಗುತ್ತಿದೆ ಎಂದು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಹೇಳಿದರು.

ಜನರ ಬೇಡಿಕೆಯಂತೆ ಬೀದರ್ ದಕ್ಷಿಣ ಕ್ಷೇತ್ರದ ಚೊಂಡಿ ಗ್ರಾಮದಲ್ಲಿ ಸುಮಾರು 1.50 ಕೋಟಿ ರೂ. ವೆಚ್ಚದ ರಸ್ತೆ ಡಾಂಬರೀಕರಣ ಕಾಮಗಾರಿಗೆ ಇಂದು ಚಾಲನೆ ನೀಡಿ ಅವರು ಮಾತನಾಡಿದರು.

ರಸ್ತೆ ನಮ್ಮ ಜೀವನದ ಒಂದು ಅವಿಭಾಜ್ಯ ಅಂಗವಾಗಿದೆ. ಪ್ರತಿ ದಿನ ರೈತರು, ಸಾರ್ವಜನಿಕರು, ವಿದ್ಯಾರ್ಥಿಗಳು ಶಾಲೆ, ಕಚೇರಿ, ಮಾರುಕಟ್ಟೆ ಅಥವಾ ಊರಿನ ಬೇರೆ ಭಾಗಗಳಿಗೆ ಹೋಗಲು ರಸ್ತೆ ಅತ್ಯಂತ ಅವಶ್ಯಕವಾಗಿದೆ ರಸ್ತೆ ಸಂಚಾರವನ್ನುಸುಗಮಗೊಳಿಸುವುದರ ನಿಟ್ಟಿನಲ್ಲಿ ಕಾಮಗಾರಿ ಹಂತ ಹಂತವಾಗಿ ಚಾಲನೆ ನೀಡಲಾಗುತ್ತಿದೆ.

ರಸ್ತೆಗಳ ನಿರ್ಮಾಣದಿಂದ ಗ್ರಾಮ ಮತ್ತು ನಗರಗಳ ನಡುವೆ ಸಂಪರ್ಕ ವೃದ್ಧಿಯಾಗುತ್ತದೆ. ರೈತರು ತಮ್ಮ ಬೆಳೆಗಳನ್ನು ಮಾರುಕಟ್ಟೆಗೆ ತಲುಪಿಸಲು ಸುಲಭವಾಗುತ್ತದೆ. ವಿದ್ಯಾರ್ಥಿಗಳು ಶಾಲೆಗಳಿಗೆ ಸಮಯಕ್ಕೆ ತಲುಪಬಹುದು, ರೋಗಿಗಳು ಆಸ್ಪತ್ರೆಗೆ ತ್ವರಿತವಾಗಿ ಹೋಗಬಹುದು. ಈ ರೀತಿಯಾಗಿ ರಸ್ತೆ ಸಮಾಜದ ಆರ್ಥಿಕ, ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಗೆ ಮಹತ್ವದ ಪಾತ್ರ ವಹಿಸುತ್ತದೆ ಹೀಗಾಗಿ ರಸ್ತೆ ನಿರ್ಮಾಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ.

ಗುತ್ತಿಗೆದಾರರು ಸಮಯಕ್ಕೆ ಸರಿಯಾಗಿ ಕಾಮಗಾರಿ ಪೂರ್ಣಗೊಳಿಸಬೇಕು ಹಾಗೂ ಗುಣಮಟ್ಟದ ಕಾಮಗಾರಿ ನಡೆಸಬೇಕು ಅಧಿಕಾರಿಗಳು ಸಹ ಹೆಚ್ಚಿನ ನಿಗಾ ವಹಿಸಬೇಕು ಎಂದರು. ಗ್ರಾಮದ ಜನರ, ಸಾರ್ವಜನಿಕರು ಸಹ ರಸ್ತೆಯ ಮಹತ್ವವನ್ನು ಅರಿತು ಅದನ್ನು ಸ್ವಚ್ಛವಾಗಿಡಲು, ಕಸ ಹಾಕದಿರಲು ಮತ್ತು ಸುರಕ್ಷಿತವಾಗಿ ಪ್ರಯಾಣಿಸಲು ಎಲ್ಲರೂ ಸಹಕರಿಸಬೇಕು. ಉತ್ತಮ ರಸ್ತೆ ಎಂದರೆ ಅಭಿವೃದ್ಧಿಯ ಮಾರ್ಗ ಅದು ನಮ್ಮ ಜೀವನವನ್ನು ಸುಲಭಗೊಳಿಸಿ, ದೇಶದ ಪ್ರಗತಿಗೆ ದಾರಿ ತೆರೆಸುತ್ತದೆ ಎಂದು ತಿಳಿಸಿದರು.



## ಬಿದರಿ ವೃತ್ತಕ್ಕೆಜೀವ ಕಳೆ ತುಂಬಲು ಹೊರಟ ಸಿಲ್ವರ್ ಸ್ಟಾರ್



ಬೀದರ್.ಅ.29: ನಗರದಯುವ ಮನಸ್ಸುಗಳನ್ನು ಒಳಗೊಂಡಿರುವ ಬೀದರ್ ರೋಟರಿಕ್ಲಬ್ ಸಿಲ್ವರ್ ಸ್ಟಾರ್, ನಗರವನ್ನು ಸುಂದರೀಕರಣಗೊಳಿಸುವ ಕಾರ್ಯಕ್ಕೆ ಮುಂದಾಗಿದ್ದು, ನಗರದ ಬಿದರಿ ವೃತ್ತದ ಸುತ್ತ ಸಸಿಗಳನ್ನು ನೆಡುವ ಮೂಲಕ ಈ ಮಹತ್ತರಕಾರ್ಯಕ್ರಮಕ್ಕೆ ಚಾಲನೆಯನ್ನು ನೀಡಿದ್ದಾರೆ.

ಬೀದರ್‌ಜಿಲ್ಲೆಯ ಹೆಮ್ಮೆಯ ಪ್ರತೀಕವಾದ ಬಿದರಿ ಕಲೆಯ ಸ್ಮರಣಾರ್ಥವಾಗಿ ಐತಿಹಾಸಿಕ ನಗರದ ಹೈದರಾಬಾದ್ ರಸ್ತೆಯಲ್ಲಿ ನಿರ್ಮಿಸಿರುವ ಬಿದರಿ ವೃತ್ತಜನ ಪ್ರತಿನಿಧಿಗಳ ಹಾಗೂ ಅಧಿಕಾರಿಗಳ ನಿರ್ಲಕ್ಷದಿಂದಾಗಿತನ್ನ ಕಳೆಯನ್ನು ಕಳೆದುಕೊಂಡಿತ್ತು. ಈ ಹಿನ್ನೆಲೆಯಲ್ಲಿರೋಟರಿ ಸಿಲ್ವರ್ ಸ್ಟಾರ್ ಅಧ್ಯಕ್ಷ ಆದಿಶ್ ವಾಲಿಯವರ ನೇತೃತ್ವದಲ್ಲಿ ವೃತ್ತವನ್ನು ಶುಚಿಗೊಳಿಸಿ, ವೃತ್ತದ ಸುತ್ತ ಸಸಿಗಳನ್ನು ನೆಟ್ಟು, ಬಿದರಿ ವೃತ್ತಕ್ಕೆಜೀವ ಕಳೆ ತುಂಬಲು ಹೊರಟಿದ್ದಾರೆ.ಇದೇ ವೇಳೆ ವೃತ್ತದ ಸುಂದರಿ ಕರಣದ ಮಾಡಲ್ ಪೋಸ್ಟರ ಬಿಡುಗಡೆ ಮಾಡಿದ ರೋಟರಿ ಇಂಟರ್ನ್ಯಾಷನಲ್ 3160 ಜಿಲ್ಲಾಗವರ್ನರ್ ಎಂ.ಕೆ ರವೀಂದ್ರ ಮಾತನಾಡಿ, ನಮ್ಮ ಸಿಲ್ವರ್ ಸ್ಟಾರ್ ವತಿಯಿಂದ ಬಿದರಿ ವೃತ್ತವನ್ನು ಸುಂದರಿಕರಣಗೊಳಿಸಲು ಹೊರಟಿರುವುದು ಖುಷಿಯ ವಿಚಾರ. ಸಾಮಾಜಿಕ, ಶೈಕ್ಷಣಿಕ ಸೇವೆಗಳ ಮೂಲಕ ಗುರುತಿಸಿಕೊಂಡಿರುವ ನಮ್ಮ ರೋಟರಿ ಸಂಸ್ಥೆಯು, ಇಂತಹ ಮಹತ್ತರ ಕೆಲಸಗಳ ಮೂಲಕ ನಗರವನ್ನ ಸುಂದರವಾಗಿಡಲು ಪರಿಶ್ರಮವಹಿಸುತ್ತದೆ ಎಂದರು.

ರೋಟರಿ ಸಿಲ್ವರ್ ಸ್ಟಾರ್ನ ಅಧ್ಯಕ್ಷ ಆದಿಶ್ ವಾಲಿ ಮಾತನಾಡಿ, ಮಹಾನಗರ ಪಾಲಿಕೆಯ ಒಡಂಬಡಿಕೆಯೊಂದಿಗೆ ನಾವು ಬಿದರಿ ವೃತ್ತದಿಂದ ಹತ್ತಿರದ ಫ್ಲೈಓವರ್ ವರೆಗಿನರಸ್ತೆಯನ್ನು ಸುಂದರಿಕರಣ ಗೊಳಿಸಲು ಒಂದು ಮಾಡೆಲ್ ತಯಾರಿಸಿದ್ದೇವೆ. ಈ ಕಾರ್ಯವನ್ನು ಮೂರು ಹಂತಗಳಲ್ಲಿ ವಿಂಗಡಿಸಲಾಗಿದ್ದು, ಮೊದಲ ಹಂತದಲ್ಲಿ ವೃತ್ತದ ಸುತ್ತ ಸಸಿನೆಟ್ಟಿದ್ದೇವೆ. ಎರಡನೇ ಹಂತದಲ್ಲಿ ವೃತ್ತಕ್ಕೆ ಬಣ್ಣ ಹಚ್ಚುವ ಕೆಲಸ ಮಾಡುತ್ತೇವೆ. ಮೂರನೇ ಹಂತದಲ್ಲಿ ಫ್ಲೈಓವರ್ ಕೆಳಗಡೆ ಬಿದರಿ ಕಲೆ ಹಾಗೂ ಜಿಲ್ಲೆಯಇನ್ನಿತರ ಸಾಂಸ್ಕೃತಿಕ ಚಟುವಟಿಕೆಗಳ ಪೇಂಟಿಂಗ್ ಮಾಡಿಸುವ ಮೂಲಕ ಅಂತ ರಾಜ್ಯದಿಂದ ಆಗಮಿಸುವ ಜನರಿಗೆಜಿಲ್ಲೆಯ ಸಾಂಸ್ಕೃತಿಕ ಚಟುವಟಿಕೆಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಮಾಡುತ್ತೇವೆ ಎಂದರು.

ಕಾರ್ಯದರ್ಶಿ ಕಿರಣ್ ಸ್ಯಾಮವೆಲ್ ಮಾತನಾಡಿ, ಬಿದರಿ ವೃತ್ತದ ಬ್ಯೂಟಿಫಿಕೇಷನ್ ಗಾಗಿ ವಿನೂತನ ಕಾರ್ಯ ಕ್ರಮಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಜಿಲ್ಲೆಯಜನರ ಸಹಕಾರದೊಂದಿಗೆ ನಗರದಅಂದವನ್ನು ಹೆಚ್ಚಿಸುವ ಕೆಲಸ ಮಾಡುತ್ತೇನೆ ಎಂದರು.

ಕಾರ್ಯಕ್ರಮದಲಿ ರೋಟರಿಯ ಅಸಿಸ್ಟಂಟ್ ಗವರ್ನರ್ ಹಾವಶೆಟ್ಟಿ ಪಾಟೀಲ್, ಉಪಾಧ್ಯಕ್ಷ ಆನಂದ್ ಕೊಟರ್ಕಿ, ಜಾಯಿಂಟ್ ಸೆಕ್ರೆಟರಿ ಭಾವೇಶ್ ಪಟೇಲ್, ಖಜಾಂಚಿ ಅಮರೇಶ್ ಅಭಸಂಗೆ, ಯೋಜನಾ ನಿರ್ದೇಶಕಆನಂದ ಕುಲಕರ್ಣಿ, ಪೂಜಾಕೊಂಡಿ, ಕೀರ್ತಿ ವಾಲೆ, ಸದಸ್ಯತ್ವ ಅಭಿವೃದ್ಧಿ ನಿರ್ದೇಶಕಿ ಸ್ಪೂರ್ತಿಧನ್ನೂರ, ಮಾಧ್ಯಮ ಸಂಯೋಜಕಿ ಸಹನಾ ಪಾಟೀಲ, ರಾಘವೇಂದ್ರರಿ ಜೆಂತಲ್, ಮನೀಶ್ ಸಿಂಧೋಲ್, ಮಂಜುನಾಥ ಖೂಬಾ, ಮಾಜಿ ಕಾರ್ಯದರ್ಶಿ ಪೂಜಾ ಸ್ಯಾಮವೆಲ್, ಸೇರಿ ಸಿಲ್ವರ್ ಸ್ಟಾರ್ ನ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

## ನ.7 ರಂದು ಕನ್ನಡ ದೀಕ್ಷೆ ಕಾರ್ಯಕ್ರಮ: ಸೋಮನಾಥ ಮುಧೋಳ


ಬೀದರ್.ಅ.29: ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ವತಿಯಿಂದ ಬೀದರ್‌ನ ಪೂಜ್ಯ ಚನ್ನಬಸವ ಪಟ್ಟದ್ದೇವರು ರಂಗಮಂದಿರದಲ್ಲಿ ನ. 7 ರಂದು ಕನ್ನಡ ದೀಕ್ಷೆ ಹಾಗೂ ಪ್ರತಿಜ್ಞಾ ವಿಧಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ಸೋಮನಾಥ ಮುಧೋಳ ಹೇಳಿದರು.

ಭಾಲ್ಕಿ ಪಟ್ಟಣದ ಚನ್ನಬಸವಾಶ್ರಮದಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದ ಪೂರ್ವಭಾವಿ ಸಿದ್ಧತಾ ಸಭೆಯಲ್ಲಿ ಅವರು ಮಾತನಾಡಿದರು.ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಉದ್ಘಾಟಿಸುವರು. ಬಸವಕಲ್ಯಾಣದ ಅನುಭವ ಮಂಟಪದ ಅಧ್ಯಕ್ಷ ಡಾ. ಬಸವಲಿಂಗ ಪಟ್ಟದ್ದೇವರು, ಭಾಲ್ಕಿ ಹಿರೇಮಠ ಸಂಸ್ಥಾನದ ಗುರುಬಸವ ಪಟ್ಟದ್ದೇವರು ಸಾನಿಧ್ಯ, ವೇದಿಕೆ ರಾಜ್ಯ ಅಧ್ಯಕ್ಷ ನಾರಾಯಣ ಗೌಡ ಅಧ್ಯಕ್ಷತೆ ವಹಿಸುವರು. ಪೌರಾಡಳಿತ ಸಚಿವ ರಹೀಂ ಖಾನ್,ಏಕತಾ ಫೌಂಡೇಷನ್ ಅಧ್ಯಕ್ಷ ರವೀಂದ್ರ ಸ್ವಾಮಿ, ಜಿ.ಎಸ್. ಇನ್ಫ್ರಾ ವ್ಯವಸ್ಥಾಪಕ ನಿರ್ದೇಶಕ ಸೂರ್ಯಕಾಂತ ಅಲ್ಮಾಜೆ ಹಾಗೂ ಜಾಗತಿಕ ಲಿಂಗಾಯತ ಮಹಾಸಭಾ ರಾಜ್ಯ ಉಪಾಧ್ಯಕ್ಷ ಬಸವರಾಜ ಧನ್ನೂರ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು ಎಂದು ತಿಳಿಸಿದರು.

ಸಾರ್ವಜನಿಕರಲ್ಲಿ ಕನ್ನಡಾಭಿಮಾನ ಬೆಳೆಸುವ ದಿಸೆಯಲ್ಲಿ ರಾಜ್ಯದಾದ್ಯಂತ ಕನ್ನಡ ದೀಕ್ಷೆ ಕಾರ್ಯಕ್ರಮ ಏರ್ಪಡಿಸಲಾಗುತ್ತಿದೆ. ಜಿಲ್ಲೆಯಲ್ಲಿ ನಡೆಯಲಿರುವ ಕಾರ್ಯಕ್ರಮಕ್ಕೆ ಭರದ ಸಿದ್ಧತೆ ನಡೆದಿದೆ. ಕಾರ್ಯಕ್ರಮದ ಯಶಸ್ವಿಗೆ ವೇದಿಕೆ ಕಾರ್ಯಕರ್ತರು ಹಾಗೂ ಕನ್ನಡಾಭಿಮಾನಿಗಳ ಸಹಕಾರ ಅಗತ್ಯವಿದೆ ಎಂದು ಹೇಳಿದರು.

ವೇದಿಕೆ ತಾಲ್ಲೂಕು ಘಟಕಗಳ ಅಧ್ಯಕ್ಷರು ಆಯಾ ತಾಲ್ಲೂಕುಗಳಿಂದ ಕನಿಷ್ಠ 200 ಜನರನ್ನು ಕಾರ್ಯಕ್ರಮಕ್ಕೆ ಕರೆ ತರಬೇಕು. ಈಗಿನಿಂದಲೇ ಇದಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವೇದಿಕೆಯ ಭಾಲ್ಕಿ ತಾಲ್ಲೂಕು ಘಟಕದ ಅಧ್ಯಕ್ಷ ಬಂಡೆಪ್ಪ ಕಸರಣ್ಣ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಉಪಾಧ್ಯಕ್ಷರಾದ ಸೋಮಶೇಖರ ಸಜ್ಜನ್, ಶಿವರುದ್ರ ತೀರ್ಥ, ಕಾರ್ಯದರ್ಶಿ ರವಿ ಭವರೆ, ಔರಾದ್ ತಾಲ್ಲೂಕು ಘಟಕದ ಅಧ್ಯಕ್ಷ ಅನಿಲ್ ಹೇಡೆ, ಕಮಲನಗರ ತಾಲ್ಲೂಕು ಘಟಕದ ಅಧ್ಯಕ್ಷ ಮಂಜುನಾಥ ಸ್ವಾಮಿ, ಬಸವಕಲ್ಯಾಣ ತಾಲ್ಲೂಕು ಘಟಕದ ಅಧ್ಯಕ್ಷ ಗಣೇಶ ಸತಾಣೆ, ಹುಮನಾಬಾದ್ ತಾಲ್ಲೂಕು ಘಟಕದ ಅಧ್ಯಕ್ಷ ವೀರೇಶ ರೆಡ್ಡಿ, ಬೀದರ್ ತಾಲ್ಲೂಕು ಘಟಕದ ಅಧ್ಯಕ್ಷ ವೀರಶೆಟ್ಟಿ ಗೌಸಪುರೆ, ಬೀದರ್ ನಗರ ಘಟಕದ ಅಧ್ಯಕ್ಷ ಶಿವಕುಮಾರ ಭೈರನಳ್ಳಿಕರ್, ತುಕಾರಾಮ ಜೈರಾಮ ಮತ್ತಿತರರು ಉಪಸ್ಥಿತರಿದ್ದರು.



# ನಿಂಬರ್ಗಾ ಸರ್ಕಾರಿ ಪಿಯು ಕಾಲೇಜಿನಲ್ಲಿ ಎನ್‌ಎಸ್‌ಎಸ್ ಶಿಬಿರ ಉದ್ಘಾಟನೆ



ಕಲಬುರಗಿ,ಅ.29: ಸಮಾಜದಲ್ಲಿ ಸಾರ್ಥಕ ಬದುಕು ಕಂಡುಕೊಳ್ಳಲು ಕೆಲಸಗಳು ಕೃತಿಯ ಮೂಲಕ ಮಾಡಿ ತೋರಿಸಬೇಕು ಎಂದು ಮಾದನ ಹಿಪ್ಪರಗಿ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಮಹಾದೇವ ನಲಕಂಟೆ ಹೇಳಿದರು.

ಅಳಂದ ತಾಲೂಕಿನ ನಿಂಬರಗಿ ಸರಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದರು.

ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಸಮಯಕ್ಕೆ ಮಹತ್ವ ಕೊಡಬೇಕು. ನಮ್ಮ ಸಂವಿಧಾನ ಹೆಣ್ಣು ಮಕ್ಕಳಿಗೆ ಶಿಕ್ಷಣ ಹಕ್ಕನ್ನು ಲಭಿಸುವಂತೆ ಮಾಡಿದ ಪ್ರಯುಕ್ತ ಇಂದು ಮಹಿಳೆಯರು ಉನ್ನತ ಸ್ಥಾನದಲ್ಲಿ ಕಾರ್ಯ ನಿರ್ವಹಿಸುವ ಹಾಗೆ ಆಗಿದೆ ತಾವು ಶ್ರಮಪಟ್ಟು ಶಿಕ್ಷಣ ಸಂಪಾದಿಸಿಕೊಂಡರೆ ಮುಂದೆ ತಾವು ಕೂಡಾ ಉನ್ನತ ಹುದ್ದೆಗಳನ್ನು ಸಂಪಾಧಿಸಿಕೊಳ್ಳಬಹುದು ಎಂದು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಶಿಬಿರವನ್ನು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ರೇಖಾಬಾಯಿ ರಮೇಶ ಚವಾಣ ಉದ್ಘಾಟಿಸಿದರು.

ಅತಿಥಿಗಳಾಗಿ ಚಂದ್ರಕಾಂತ ಸನ್ನದಿ ಆಗಮಿಸಿದ್ದರು. ಸಮಾರಂಭ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಚಾರ್ಯ ಡಾ. ಭೀಮರಾವ್ ಅರಿಕೇರಿ ಅವರು ವಹಿಸಿದ್ದರು.ಉಪನ್ಯಾಸಕ ಮಲ್ಲಿನಾಥ ನಾಟಿಕರ್ ಸ್ವಾಗತ ಕೋರಿದರು.

ಕಾಲೇಜಿನ ಎನ್ ಎಸ್ ಎಸ್ ಅಧಿಕಾರಿ ರವಿಶಂಕರ ವಮ್ಮಾ ವಿಶೇಷ ಶಿಬಿರ ಕುರಿತು ಪ್ರಾಸ್ತವಿಕ ಮಾತನಾಡಿದರು.

ಉನ್ಯಾಸಕರಾದ ವೆಂಕಟೇಶ್ ಗುಪ್ತ ಸಿದ್ದರಾಮ ಸನಗುಂದಿ, ತೇಜಸ್ವಿನಿ ಪಾಟೀಲ್ ರೇಣುಕಾ ಸಿರಾಗಸಪುರ್ ಶಿವಮ್ಮ ಹಾಗೂ ಲಕ್ಷ್ಮಿಪುತ್ರ ನಿಂಬರ್ಗಾ ಗ್ರಾಮದ ಮುಖಂಡರಾದ ಶಿವಕುಮಾರ್ ನಂದಿ ಜೊತೆಗೆ ಕಾಲೇಜಿನ ಏನ್ ಎಸ್ ಎಸ್ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಉಪನ್ಯಾಸಕ ಲಕಪತಿರಾಜ್ ಬಡದಾಳ ನಿರೂಪಿಸಿದ ಕಾರ್ಯಕ್ರವನ್ನು ಏನ್ ಎಸ್ ಎಸ್ ಅಧಿಕಾರಿ ರವಿಶಂಕರ್ ವವಮ್ಮಾ ವಂದನಾರ್ಪಣೆ ಮಾಡಿದರು.

ನಿಂಬರ್ಗಾ ಗ್ರಾಮದ ಶರಣ ನಗರದಲ್ಲಿ ಒಂದು ವಾರ ಶ್ರಮದಾನ ಜೊತೆಗೆ ವಿವಿಧ' ವಿಷಯಗಳ ತಜ್ಞರುಗಳು ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ವಿಷಯ ಮಂಡನೆ ಮಾಡಲಿದ್ದಾರೆ ಎಂದು ಶಿಬಿರ ನಿರ್ದೇಶಕರು ತಿಳಿಸಿದರು.

# ಮಲ್ಲಿಕಾರ್ಜುನ ಶಿವಯೋಗಿಗಳು ಭಗವಂತನ ಅವತಾರಿಗಳು: ಮಹೇಶಾನಂದ ಶ್ರೀ

ಜಮಖಂಡಿ:ಅ.29:ಭಕ್ತರ ಭವರೋಗ ಕಳೆದು ಸೂರ್ಯ-ಚಂದ್ರರು ಇರುವವರೆಗೆ ಜ್ಞಾನದ ಮುತ್ತಾಗಿ ಹೋಗಿರುವ ವಿಜಯಪುರ ಜ್ಞಾನ ಯೋಗಾಶ್ರಮದ ವೇದಾಂತ ಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳು ಭಗವಂತನ ಅವತಾರಿಗಳಾಗಿದ್ದರು ಎಂದು ಹಂಚಿನಾಳ ಭಕ್ತಿಯೋಗಾಶ್ರಮದ ಮಹೇಶಾನಂದ ಮಹಾಸ್ವಾಮಿಗಳು ಹೇಳಿದರು.


ತಾಲ್ಲೂಕಿನ ಹುಲ್ಯಾಳ ಗುರುದೇವಾಶ್ರಮದ ಶ್ರೀಗುರುದೇವ ಸತ್ಸಂಗ ಬಳಗದ ಆಶ್ರಯದಲ್ಲಿ ಪ್ರತಿ ತಿಂಗಳು 4ನೇ ಭಾನುವಾರ ಹಮ್ಮಿಕೊಳ್ಳುವ ಮಾಸಿಕ ಕಾರ್ಯಕ್ರಮ ಶ್ರೀಗುರುದೇವ ಸತ್ಸಂಗದ ಅಂಗವಾಗಿ ಅ.26 ರಂದು ನಡೆದ ವೇದಾಂತಕೇಸರಿ ಮಲಿಕಾರ್ಜುನ ಶಿವಯೋಗಿಗಳು ಹಾಗೂ ಜ್ಞಾನಯೋಗಿ ಸಿದ್ಧೇಶ್ವರ ಮಹಾಸ್ವಾಮಿಗಳ ಜಯಂತ್ಯುತ್ಸವದ ಸಾನ್ನಿಧ್ಯ ವಹಿಸಿ ಅವರು ಮಲ್ಲಿಕಾರ್ಜುನ ಶಿವಯೋಗಿಗಳ ಜೀವನ ಸಂದೇಶ ಕುರಿತು ಆಶೀರ್ವಚನ ನೀಡಿದರು.

ವೇದಾಂತಕೇಸರಿ ಮಲ್ಲಿಕಾರ್ಜುನ ಶಿವಯೋಗಿಗಳು ಆರುವ ದೀಪ ಹಚ್ಚಲಿಲ್ಲ. ಆರದ ಜ್ಞಾನದೀಪ ಹಚ್ಚಿದರು. ಕೆಳಗೆ ಬಿದ್ದವರನ್ನು ಎತ್ತಿಹಿಡಿದು ತಾಯಿ, ಗುರುವಾಗಿದ್ದರು. ಭಕ್ತರಿಗೆ ಸಂಸ್ಕಾರ ನೀಡಿ ಜ್ಞಾನ ಹಂಚಿ ಮನೆ-ಮನಕ್ಕೆ ಜ್ಞಾನದ ದೀಪ ಹಚ್ಚುವ ಕಾಯಕ ಮಾಡಿದ ಯುಗಪುರುಷ ಎನಿಸಿದ್ದಾರೆ ಎಂದರು.

ಜಮಖಂಡಿಯ ಬಸವ ಜ್ಯೋತಿ ಶಿಕ್ಷಣ ಸಮೂಹ ಸಂಸ್ಥೆಗಳ ಆಡಳಿತಾಧಿಕಾರಿ ಪ್ರೊ.ಬಸವರಾಜ ಕಡ್ಡಿ ಮಾತನಾಡಿ, ಜ್ಞಾನಯೋಗಿ ಸಿದ್ಧೇಶ್ವರ ಮಹಾಸ್ವಾಮಿಗಳು ಉಪಮೆಗೆ ನಿಲುಕದ ಉಪಮಾತೀತರು, ಜೇಬಿಲ್ಲದಂಗಿಯ ವೈರಾಗಿ, ಅರಿವಿನ ಜೋಳಿಗೆ ಹಿಡಿದ ಜಂಗಮಯೋಗಿ, ಸರಳತೆಯ ಸಂತ, ದೈವಿಕತೆಯ ಚರಮೂರ್ತಿ ಆಗಿದ್ದರು ಎಂದರು.

ಸಂಗ್ರಹ ಬುದ್ಧಿಯನ್ನು ಅಳಿದು, ಸಂಬಂಧಗಳ ವ್ಯಾಮೋಹ ಕಳೆದುಕೊಂಡು, ಅಧಿಕಾರ-ಅಂತಸ್ತಿನ ಬಣ್ಣ ಕಳಚಿಕೊಂಡು ಸದಾ ಪರಮ ಸುಖಿಯಾಗಿದ್ದರು. ಯಾವ ದೋಷಗಳಿಗೆ ಅಂಟಿಕೊಳ್ಳದ ನಿಜೈಕ್ಯರಾಗಿದ್ದರು. ಜ್ಞಾನದ ಅಗ್ನಿಯ ಸ್ಪರ್ಶದಿಂದ ಯಾವ ಅವಗುಣಗಳು ಅವರಲ್ಲಿರಲಿಲ್ಲ. ದೇಹವನ್ನು ದಂಡಿಸದೆ ಒಳಗಿನ ಪರಮಾತ್ಮನ ಅನುಭವಿಸುವ ಬೆಡಗನ್ನು ಅರಿತಿದ್ದರು ಎಂದರು. ಮೈಗೂರಿನ ಶಿವಾನಂದ ಮಠದ ಗುರುಪ್ರಸಾದ ಮಹಾಸ್ವಾಮಿಗಳು, ಸಿದ್ದಾಪುರದ ಅಡವಿಸಿದ್ಧೇಶ್ವರ ಮಠದ ಮಾತೋಶ್ರೀ ಮಹಾದೇವಿ ತಾಯಿ ಸಾನ್ನಿಧ್ಯ ವಹಿಸಿದ್ದರು. ಮಲ್ಲಿಕಾರ್ಜುನ ಶಿವಯೋಗಿಗಳಿಂದ ಲಿಂಗದೀಕ್ಷೆ ಪಡೆದ ದಾಂಡೇಲಿಯ ವಲಯ ಅರಣ್ಯಾಧಿಕಾರಿ ಅಶೋಕ ಪಾಟೀಲ, ಬೆಳಗಾವಿಯ ಶ್ರೀಮಲ್ಲಿಕಾರ್ಜುನ ವಿದ್ಯಾಪೀಠದ ಅಧ್ಯಕ್ಷ ಜಿ.ಎಂ. ಪಾಟೀಲ, ಹುನ್ನೂರಿನ ಚಂದ್ರಶೇಖರ ಸಾವಳಗಿ, ಲಕ್ಷ್ಮೇಶ್ವರದ ಚಿದಾನಂದ ಪಾಟೀಲ, ವಿಜಯಲಕ್ಷ್ಮಿ ಪಾಟೀಲ, ಜಮಖಂಡಿಯ ವಿಮಲಾ ಬೊಮ್ಮನಹಳ್ಳಿ ಅವರನ್ನು ಸನ್ಮಾನಿಸಲಾಯಿತು.

ಶ್ರೀಗುರುದೇವ ಸಂಗೀತ ಬಳಗದ ಕಲಾವಿದರಾದ ಗುರುಬಸುಗೌಡ ಪಾಟೀಲ, ಶಿವಾನಂದ ಬಾಡನವರ, ಸಿದ್ದು ಉಪ್ಪಲದಿನ್ನಿ ಸಂಗೀತ ಸೇವೆ ಸಲ್ಲಿಸಿದರು. ಪ್ರಾಚಾರ್ಯ ಡಾ.ಟಿ.ಪಿ. ಗಿರಡ್ಡಿ ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಸಂಗಮೇಶ ತೆಲಸಂಗ ನಿರೂಪಿಸಿದರು. ಶ್ರೀಗುರುದೇವಾಶ್ರಮದ ಹರ್ಷಾನಂದ ಮಹಾಸ್ವಾಮಿಗಳು ಶರಣು ಸಮರ್ಪಿಸಿದರು.



# ಓದುವ ಹವ್ಯಾಸವು ಸಂವಹನ ಕೌಶಲ್ಯ ಸುಧಾರಿಸುತ್ತದೆ: ಅನಿಲಕುಮಾರ ಬಿಡವೆ



ಕಲಬುರಗಿ;ಅ.29: ವಿದ್ಯಾರ್ಥಿಗಳಲ್ಲಿ ಸಂವಹನ ಕೌಶಲ್ಯವನ್ನು ಸುಧಾರಿಸಲು ಮತ್ತು ಸ್ಪರ್ಧಾತ್ಮಕ ಮನೋಭಾವವನ್ನು ಹೆಚ್ಚಿಸಲು ಸಹಾಯ ಮಾಡುವ ಕನಿಷ್ಠ ಒಂದು ಪತ್ರಿಕೆಯನ್ನು ಪ್ರತಿದಿನ ಓದುವ ಅಭ್ಯಾಸವನ್ನು ಮಾಡಿಕೊಳ್ಳಬೇಕೆಂದು ಶರಣಬಸವ ವಿಶ್ವವಿದ್ಯಾಲಯದ ಉಪಕುಲಪತಿ ಪ್ರೊ.ಅನಿಲಕುಮಾರ ಬಿಡವೆ ವಿದ್ಯಾರ್ಥಿಗಳನ್ನು ಒತ್ತಾಯಿಸಿದರು.

ಕಲಬುರಗಿ ನಗರದ ಶರಣಬಸವ ವಿಶ್ವವಿದ್ಯಾಲಯದ ದೊಡ್ಡಪ್ಪ ಅಪ್ಪ ಸಭಾ ಮಂಟಪದಲ್ಲಿ ಮಂಗಳವಾರದಂದು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ "ಸಮಗ್ರತೆ ಮತ್ತು ಮಹತ್ವಾಕಾಂಕ್ಷೆಯನ್ನು ಸಮತೋಲನಗೊಳಿಸುವುದು" ಎಂಬ ಒಂದು ದಿನದ ವಿಚಾರ ಸಂಕಿರಣ ಹಾಗೂ ವ್ಯವಹಾರ ಅಧ್ಯಯನ ನಿಕಾಯದ ವಿದ್ಯಾರ್ಥಿಗಳಿಗಾಗಿ "ವ್ಯಾಪಾರ ಭೂದೃಶ್ಯ, ಕ್ಯಾಂಪಕ್ಸ್‌ನಿಂದ ಕಾರ್ಪೊರೇರ್‌ಗೆ ನ್ಯಾವಿಗೇಟ್ ಮಾಡುವುದು" ಎಂಬ ಮತ್ತೊಂದು ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರೊ.ಬಿಡವೆ, ಶರಣಬಸವ ವಿಶ್ವವಿದ್ಯಾಲಯವು 2017ರಲ್ಲಿ ಅಂತಿಮ ರೂಪ ಪಡೆಯುವ ಮೊದಲೇ ಶರಣಬಸವೇಶ್ವರ ಸಂಸ್ಥಾನದ 8ನೇ ಮಹಾದಾಸೋಹ ಪೀಠಾಧಿಪತಿ ಲಿಂಗೈಕ್ಯ ಪೂಜ್ಯ ಡಾ. ಶರಣಬಸವಪ್ಪ ಅಪ್ಪಾಜಿ ಅವರು ವಿದ್ಯಾರ್ಥಿಗಳಿಗೆ ಉಚಿತ ದಿನಪತ್ರಿಕೆಗಳನ್ನು ಒದಗಿಸುವ ಅಭ್ಯಾಸವನ್ನು ಪ್ರಾರಂಭಿಸಿದರು ಎಂದು ಹೇಳಿದರು.

ದಿನಪತ್ರಿಕೆಗಳನ್ನು ಅತ್ಯಾಸಕ್ತಿಯಿಂದ ಓದುವ ಅಭ್ಯಾಸವು ವಿದ್ಯಾರ್ಥಿಗಳ ಜ್ಞಾನವನ್ನು ಹೆಚ್ಚಿಸುತ್ತದೆ ಮತ್ತು ಬರವಣಿಗೆ ಹಾಗೂ ಸಂವಹನ ಕೌಶಲ್ಯವನ್ನು ಸುಧಾರಿಸುತ್ತದೆ ಎಂದು ಪೂಜ್ಯ ಡಾ. ಅಪ್ಪಾಜಿ ಯಾವಾಗಲೂ ನಂಬಿದ್ದರು. ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ನಡೆಸುತ್ತಿರುವ ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಉಚಿತವಾಗಿ ದಿನಪತ್ರಿಕೆಗಳನ್ನು ವಿತರಿಸುವ ಬಗ್ಗೆ ಅವರು ಮೊದಲೇ ಹೇಳಿದ್ದರು ಮತ್ತು ನಂತರ ಈ ಅಭ್ಯಾಸವನ್ನು ಶರಣಬಸವ ವಿಶ್ವವಿದ್ಯಾಲಯದಲ್ಲಿ ಪರಿಚಯಿಸಲಾಯಿತು. ಆದಾಗ್ಯೂ, ಕೋವಿಡ್-19 ಅವಧಿಯಲ್ಲಿ ಲಾಕ್‌ಡೌನ್‌ನಿಂದಾಗಿ ವಿದ್ಯಾರ್ಥಿಗಳಿಗೆ ಉಚಿತ ದಿನಪತ್ರಿಕೆಗಳ ಪೂರೈಕೆಯಲ್ಲಿ ಅಡ್ಡಿ ಉಂಟಾಯಿತು ಎಂದು ಅವರು ಹೇಳಿದರು.

ದಿ ಹಿಂದೂ ಪತ್ರಿಕೆಯೊಂದಿಗೆ ತಿಳುವಳಿಕೆ ಒಪ್ಪಂದಕ್ಕೆ (ಎಂಒಯು) ಸಹಿ ಹಾಕುವ ಮೂಲಕ ಶರಣಬಸವ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಗೆ ಉಚಿತ ದಿನಪತ್ರಿಕೆಗಳ ಪೂರೈಕೆಯನ್ನು ಈಗ ಪುನರುಜ್ಜೀವನಗೊಳಿ ಸಲಾಗುತ್ತಿದೆ. ಇಂಜಿನಿಯರಿಂಗ್ ಮತ್ತು ವ್ಯವಹಾರ ಅಧ್ಯಯನ ನಿಕಾಯದ ವಿದ್ಯಾರ್ಥಿಗಳು ಈಗ ಈ ಉಪಕ್ರಮದ ಮೂಲಕ ಪ್ರಯೋಜನ ಪಡೆಯುತ್ತಾರೆ ಮತ್ತು ನಂತರ ಇದನ್ನು ಇತರ ನಿಕಾಯಗಳ ಎಲ್ಲಾ ವಿದ್ಯಾರ್ಥಿಗಳಿಗೆ ವಿಸ್ತರಿಸಲಾಗುವುದು ಎಂದು ಪ್ರೊ.ಬಿಡವೆ ಹೇಳಿದರು.

ಒಪ್ಪಂದದ ಪ್ರಕಾರ, ದಿ ಹಿಂದೂ ಸಬ್ಸಿಡಿ ದರದಲ್ಲಿ ಪತ್ರಿಕೆಗಳನ್ನು ಪೂರೈಸುವುದರ ಜೊತೆಗೆ ಇಂಜಿನಿಯರಿಂಗ್ ಮತ್ತು ವ್ಯವಹಾರ ಅಧ್ಯಯನ ನಿಕಾಯದ ವಿದ್ಯಾರ್ಥಿಗಳಿಗೆ ಸಂವಹನ, ಸಾರ್ವಜನಿಕ ಭಾಷಣ, ತಂಡದ ಕೆಲಸ ಮತ್ತು ಬಣ್ಣ, ವಿಮರ್ಶಾತ್ಮಕ ಚಿಂತನೆ, ಕೋಪ ನಿರ್ವಹಣೆ ಮತ್ತು ಇತರ ವಿಷಯಗಳ ಕುರಿತು ತಲಾ ಎರಡು ಕಾರ್ಯಾಗಾರಗಳನ್ನು ನಡೆಸುತ್ತದೆ. ಇಂಜಿನಿಯರಿಂಗ್ ಮತ್ತು ವ್ಯವಹಾರ ಅಧ್ಯಯನ ವಿಷಯಗಳ ಪ್ರಮುಖ ತಜ್ಞರಿಂದ ತಲಾ ಎರಡು ಅತಿಥಿ ಉಪನ್ಯಾಸ ಕಾರ್ಯಕ್ರಮಗಳನ್ನು ವಿಶ್ವವಿದ್ಯಾಲಯದಲ್ಲಿ ನಡೆಸಲಾಗುವುದು.

# ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸಲು ಅಧಿಕಾರಿಗಳು ಕೈಜೋಡಿಸಬೇಕು:ಬಿ.ಫೌಜಿಯಾ ತರನ್ನುಮ

ಕಲಬುರಗಿ:ಅ.29 :ಕಲಬುರಗಿ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಜಿಲ್ಲೆಯನ್ನಾಗಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿಗಳು ಕೈಜೋಡಿಸಬೇಕೆಂದು ಕಲಬುರಗಿ ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್ ಅವರು ಹೇಳಿದರು.

ಸೋಮವಾರದಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ವಿವಿಧ ಯೋಜನೆಗಳ ಜಿಲ್ಲಾಮಟ್ಟದ ಸಮನ್ವಯ ಸಮಿತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳ ಬಾಲ್ಯ ವಿವಾಹ ಪ್ರಕರಣಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದು, ಅಧಿಕಾರಿಗಳು ನಿರ್ಲಕ್ಷ್ಯ ವಹಿಸದೆ ಕೆಲಸ ನಿರ್ವಹಿಸಿ, ಹಳ್ಳಿಗಳಲ್ಲಿ ನಡೆಯುವ ಬಾಲ್ಯ ವಿವಾಹದ ಕುರಿತು ಮಾಹಿತಿ ಪಡೆದು ಇದನ್ನು ತಡೆಯಬೇಕು. ಬಾಲವಿವಾಹ ತಡೆದು ಅತಿ ಹೆಚ್ಚು ಪ್ರಕರಣಗಳು ದಾಖಲಿಸಿ ಕ್ರಮಕೈಗೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳೂ ಇದನ್ನು ನಿರ್ಲಕ್ಷ್ಯ ವಹಿಸಿದ್ದಲ್ಲಿ ಶಿಸ್ತಿನ ಕ್ರಮಕ್ಕೆ ಶಿಫಾರಸು ಮಾಡಲಾಗುವುದು ಎಚ್ಚರಿಸಿದರು.

ಸೀಮಂತ ಕಾರ್ಯಕ್ರಮವು ಕೇವಲ ಅಂಗನವಾಡಿ ಕೇಂದ್ರಗಳಲ್ಲಿ ಸಿಮಿತವಾಗದೇ ದೊಡ್ಡ ಪ್ರಮಾಣ ಕಾರ್ಯಕ್ರಮವನ್ನು ಆಯೋಜನೆ ಮಾಡಬೇಕು. ಜತೆಗೆ ಕಾರ್ಯಕ್ರಮದಲ್ಲಿ ಯಾವ ಆಹಾರವು ಪೌಷ್ಠಿಕಾಂಶದಿಂದ ಕೂಡಿರುತ್ತದೆ ಎಂಬುವುದನ್ನು ಅಧಿಕಾರಿಗಳು ಜಾಗೃತಿ ಮೂಡಿಸಬೇಕು ಎಂದು ಹೇಳಿದರು.

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಗೆ ನಿಗದಿಪಡಿಸಿದ ಗುರಿ ಪ್ರತಿಯೊಬ್ಬರು ಸಾಧಿಸಬೇಕು. ಕೆಲವೊಂದು ಅಧಿಕಾರಿಗಳು ಸಾಧನೆ-ಗುರಿ ಮುಟ್ಟಿರುವುದಿಲ್ಲ, ಅವರು ಹೆಚ್ಚಿನ ರೀತಿಯಲ್ಲಿ ಶ್ರಮಿಸಬೇಕು. ಎಲ್ಲಾ ಯೋಜನೆಗಳಲ್ಲಿ ತಾಲೂಕಾ ಆರೋಗ್ಯ ಅಧಿಕಾರಿಗಳು ಮತ್ತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಮೇಲ್ವಿಚಾರಕಿಯರು ಜಂಟಿ ಸಭೆಯನ್ನು ನಡೆಸಿ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದರು.

ಕೇಂದ್ರ ಸರ್ಕಾರದ ಯೋಜನೆಯಾದ ಬೇಟಿ ಬಚಾವೊ ಭೇಟಿ ಪಡಾವೂ ಯೋಜನೆಯಡಿ ಹತ್ತು ಲಕ್ಷ ರೂ. ಅನುದಾನ ನೀಡಿದ್ದು, ಇದನ್ನು ಸಮರ್ಪಕವಾಗಿ ಬಳಕೆ ಮಾಡಬೇಕು. ಈ ಯೋಜನೆ ಕುರಿತು ಅಧಿಕಾರಿಗಳು ಹೆಚ್ಚಿನ ರೀತಿಯಲ್ಲಿ ಜಾಗೃತಿ ಮೂಡಿಸಿ ಪ್ರತಿಯೊಬ್ಬ ಫಲಾನುಭವಿಗಳು ಇದರ ಲಾಭವನ್ನು ಪಡೆಯಬೇಕೆಂದು ಹೇಳಿದರು.

ಪ್ರಧಾನಮಂತ್ರಿ ಮಾತೃ ವಂದನಾ ಯೋಜನೆಯಡಿ ಆಧಾರ್ ಕಾರ್ಡ ಸಮಸ್ಯೆ ಮತ್ತು ಬ್ಯಾಂಕ್ ಖಾತೆಗೆ ಆಧಾರ್ ಲಿಂಕ್ ಇಲ್ಲದಿರುವುದು ಫಲಾನುಭವಿಗಳ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಬೇಕೆಂದು ಹೇಳಿದರು.

ಬಾಲಕಿಯರ ವಸತಿ ನಿಲಯಗಳಿಗೆ ಅನಿರೀಕ್ಷತವಾಗಿ ಭೇಟಿ ನೀಡಿ, ವಸತಿ ನಿಲಯದ ಸುತ್ತಮುತ್ತ ಸ್ವಚ್ಚತೆ, ನೀರಿನ ಸಮಸ್ಯೆಗಳನ್ನು ಅವುಗಳನ್ನು ಪರಿಶೀಲಿಸಿ ಕ್ರಮಕೈಗೊಳ್ಳಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಹಿಳಾ ಸಹಾಯವಾಣಿಗೆ ಕಡಿಮೆ ಸಂಖ್ಯೆಯಲ್ಲಿ ಕರೆಗಳು ಬಂದಿದ್ದು, ಮಹಿಳಾ ಸಹಾಯವಾಣಿ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಮೂಡಿಸಲು ಸೂಚಿಸಿದರು. ಸಖಿ ಒನ್ ಸ್ಟಾಫ್ ಸೆಂಟ???ನ ಪ್ರಕರಣಗಳು ಕಡಿಮೆ ಆಗಿದೆ. ಜನರಲ್ಲಿ ಅಧಿಕಾರಿಗಳು ಅರಿವು ಮೂಡಿಸಬೇಕು ಗೌರವಧನ, ಆಡಳಿತ ವೆಚ್ಚವನ್ನು ಸಮರ್ಪಕವಾಗಿ ಬಳಕೆ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಮೀಷನ್ ಶಕ್ತಿಯು ಮಹಿಳೆಯರ ಸುರಕ್ಷತೆ ಭದ್ರತೆ ಮತ್ತು ಸಬಲೀಕರಣಕ್ಕಾಗಿ ಮಧ್ಯಸ್ಥಿಕೆ ಕ್ರಮಗಳನ್ನು ಬಲಪಡಿಸುವ ಗುರಿಯನ್ನು ಳ್ಳಧ್ಯೇಯೋದ್ದೇಶ ಮಾದರಿಯನ್ನು ರೂಪಿಸಿದ ಒಂದು ಯೋಜನೆಯಾಗಿದೆ.





# ಜಿಲ್ಲಾಡಳಿತದಿಂದ ಕನ್ನಡ ನಾಮಫಲಕ ಅಳವಡಿಕೆ ಜಾಗೃತಿ ಅಭಿಯಾನ



ವಿಜಯಪುರ,ಅ.29 :ಜಿಲ್ಲೆಯ ವಾಣಿಜ್ಯ, ಕೈಗಾರಿಕೆ ಮತ್ತು ವ್ಯವಹಾರ ಉದ್ಯಮಗಳು, ಟ್ರಸ್ಟಗಳು, ಸಮಾಲೋಚನಾ ಕೇಂದ್ರಗಳು, ಆಸ್ಪತ್ರೆಗಳು, ಪ್ರಯೋಗಾಲಯ, ಮನೋರಂಜನಾ ಕೇಂದ್ರಗಳು ಮತ್ತು ಹೊಟೇಲ್ ಸೇರಿದಂತೆ ಅಂಗಡಿ ಮುಂಗಟ್ಟುಗಳಲ್ಲಿ ಕನ್ನಡ ಭಾಷೆಯ ಶೇ.60ರಷ್ಟು ಕನ್ನಡ ನಾಮಫಲಕ ಅಳವಡಿಸುವ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರ ನೇತೃತ್ವದಲ್ಲಿ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ವಿವಿಧ ಕನ್ನಡ ಪರ ಸಂಘಟನೆಗಳೂ ಒಳಗೊಂಡಂತೆ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ನಗರದ ವಿವಿಧ ಅಂಗಡಿಗಳಿಗೆ ಕಡ್ಡಾಯವಾಗಿ ಕನ್ನಡದಲ್ಲಿ ಶೇ. 60 ರಷ್ಟು ನಾಮಫಲಕಗಳನ್ನು ಅಳವಡಿಸುವ ಕುರಿತು ತಿಳುವಳಿಕೆ ನೀಡಲಾಯಿತು.

ಬೆಳಿಗ್ಗೆ ನಗರದ ಬಿ.ಎಲ್.ಡಿ.ಇ ಆಸ್ಪತ್ರೆಯ ಆವರಣದಿಂದ ಜಾಗೃತಿ ಅಭಿಯಾನ ಕಾರ್ಯಯಕ್ರಮವು ಆರಂಭಗೊಂಡಿತು. ಅಭಿಯಾನವು ಗಾಂಧಿ ವೃತ್ತದ ವರೆಗೂ ನಡೆಯಿತು.

ಸರ್ಕಾರದ ಆದೇಶದಂತೆ ಜಿಲ್ಲೆಯಲ್ಲಿನ ವಿವಿಧ ಅಂಗಡಿ ಮುಂಗಟ್ಟುಗಳು ಕಡ್ಡಾಯವಾಗಿ ಕನ್ನಡ ನಾಮ ಫಲಕಗಳನ್ನು ಅಳವಡಿಸಲು ಕಟ್ಟುನಿಟ್ಟಿನ ಸೂಚನೆ ನೀಡಲಾಯಿತು. ಸರ್ಕಾರದ ಆದೇಶದಂತೆ ನಾಮಫಲಕಗಳು ಶೇ.60 ರಷ್ಟು ಕನ್ನಡ ಭಾಷೆಯನ್ನೊಳಗೊಂಡಿರಬೇಕು. ಶೇ.40 ರಷ್ಟು ಉಳಿದ ಭಾಷೆಗಳನ್ನು ಬಳಸಬಹುದಾಗಿದೆ ಎಂದು ಅಭಿಯಾನದ ಮೂಲಕ ಜಾಗೃತಿ ಮೂಡಿಸಲಾಯಿತು.

ಕಡ್ಡಾಯವಾಗಿ ಕನ್ನಡದಲ್ಲಿ ಶೇ. 60 ರಷ್ಟು ನಾಮಫಲಕಗಳನ್ನು ಅಳವಡಿಸುವ ಕುರಿತು ಅಕ್ಟೋಬರ್ 31ರೊಳಗೆ ಅನುಷ್ಠಾನಕ್ಕೆ ತರಬೇಕೆಂದು ತಿಳಿಸಲಾಯಿತು.

ಇದೇ ಸಂದರ್ಭದಲ್ಲಿ ಕನ್ನಡ ಭಾಷೆ ನಾಮಫಲಕ ಒಳಗೊಳ್ಳದ ಅಂಗಡಿ, ಸಂಸ್ಥೆಗಳ ಮೇಲೆ ಕ್ರಮ ವಹಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಅವರು ಹೇಳಿದರು.

ಕನ್ನಡ ನಾಮಫಲಕ ನಿಯಮಗಳ ಉಲ್ಲಂಘನೆಗಾಗಿ ಯಾವುದೇ ಕೈಗಾರಿಕಾ, ಅಂಗಡಿ, ವಾಣಿಜ್ಯ ಸಂಸ್ಥೆಯ ಮಾಲೀಕರಿಗೆ ಮೊದಲನೇ ಅಪರಾಧಕ್ಕಾಗಿ ರೂ.ಐದು ಸಾವಿರ ದಂಡ, ನಂತರದ ಎರಡನೇ ಅಪರಾಧಕ್ಕಾಗಿ ರೂ.ಹತ್ತು ಸಾವಿರದವರೆಗೆ ವಿಸ್ತರಿಸಬುಹುದಾದ ದಂಡ, ನಂತರ ಪ್ರತಿಯೊಂದು ಅಪರಾಧಕ್ಕಾಗಿ ರೂ.ಇಪ್ಪತ್ತು ಸಾವಿರದರವಗೆ ಜುಲ್ಮಾನೆ ಮತ್ತು ಪರವಾನಿಗೆ ರದ್ದುಪಡಿಸಲು ಅವಕಾಶವಿದೆ ಎಂದು ಜಾಗೃತಿ ಮೂಡಿಸಲಾಯಿತು.

ಈ ವೇಳೆ ಕನ್ನಡ ನಾಮಫಲಕ ಅಳವಡಿಸದ ಅಂಗಡಿ ಮಾಲೀಕರಿಗೆ ನೋಟೀಸ್ ನೀಡಿ ಅಕ್ಟೋಬರ್ 31 ರೊಳಗೆ ಕನ್ನಡ ನಾಮ ಫಲಕ ಅಳವಡಿಸಬೇಕು ಎಂದು ಜಾಗೃತಿ ಮೂಡಿಸಲಾಯಿತು.ಇದೇ ಸಂದರ್ಭದಲ್ಲಿ ನಾಮ ಫಲಕಗಳಲ್ಲಿ ಕನ್ನಡ ಭಾಷೆಯನ್ನು ಶೇ.60ಕ್ಕೂ ಹೆಚ್ಚು ಬಳಸಿದ ಅಂಗಡಿ ಮಾಲೀಕರಿಗೆ ಅಭಿನಂದಿಸಲಾಯಿತು.

# ಸೈಬರ್ ಸೆಕ್ಯುರಿಟಿ ಫಿನಿಶಿಂಗ್ ಸ್ಕೂಲ್ ಕಾರ್ಯಕ್ರಮದ 2ನೇ ತಂಡಕ್ಕೆ ಚಾಲನೆ

ಕಲಬುರಗಿ,ಅ.29:ನಗರದ ಪಿ.ಡಿ.ಎ. ಇಂಜಿನಿಯರಿಂಗ್ ಕಾಲೇಜು ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗವು ಸೈಬರ್ ಸೆಕ್ಯುರಿಟಿ ಸೆಂಟರ್ ಆಫ್ ಎಕ್ಸಲೆನ್ಸ್, ಕರ್ನಾಟಕ ಮತ್ತು ಕೆ–ಟೆಕ್ ಸಹಯೋಗದೊಂದಿಗೆ, ಅಥಿಖಜಛಿಏ ಸೈಬರ್ ಸೆಕ್ಯುರಿಟಿ ಫಿನಿಶಿಂಗ್ ಸ್ಕೂಲ್ ಕಾರ್ಯಕ್ರಮದ 2ನೇ ತಂಡದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಿತ್ತು.

ಕಾರ್ಯಕ್ರಮ ಸುರಭಿ ಜೋಶಿ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ನಂತರಬೆಂಗಳೂರಿನ ಐಐಎಸ್‌ಸಿ ಮತ್ತು ಸೈಸೆಕ್ ಕಾರ್ಯಕ್ರಮ ವ್ಯವಸ್ಥಾಪಕ ಗಿರೀಶ್ ಬಡಿಗೇರ್ ಅವರು ಕಾರ್ಯಕ್ರಮದ ಪರಿಚಯಾತ್ಮಕ ಭಾಷಣ ಮಾಡಿದರು. ಅವರು ಫಿನಿಶಿಂಗ್ ಸ್ಕೂಲ್ ಕಾರ್ಯಕ್ರಮದ ಉದ್ದೇಶಗಳು ಮತ್ತು ಸಂಪನ್ಮೂಲ ವ್ಯಕ್ತಿಗಳನ್ನು ಪರಿಚಯಿಸಿದರು. ಸೈಬರ್ ಭದ್ರತೆ ಬಗ್ಗೆ ಅರಿವು ಮೂಡಿಸಲು ಹಾಗೂ ಶಿಕ್ಷಣ ಮತ್ತು ಉದ್ಯಮದ ನಡುವಿನ ಅಂತರವನ್ನು ಕಡಿಮೆ ಮಾಡಲು ಕರ್ನಾಟಕ ಸರ್ಕಾರವು ಸೈ ಸೆಕ್ ಮೂಲಕ ಕೈಗೊಂಡಿರುವ ಪ್ರಯತ್ನಗಳನ್ನು ಅವರು ಒತ್ತಿ ಹೇಳಿದರು.

ಸಿಎಸ್‌ಇ ವಿಭಾಗದ ಮುಖ್ಯಸ್ಥರಾದ ಡಾ. ಸುಜಾತಾ ತೇರ್ದಾಳ ಅವರು ಗಣ್ಯರನ್ನು ಸ್ವಾಗತಿಸಿದರು.

ಅಗಮ್ಯ ಸೈಬರ್ ಟೆಕ್, ಧಾರವಾಡದ ಸಂಸ್ಥಾಪಕ ಮತ್ತು ಸಿಇಒ ಮಹೇಶ್ ವಸ್ತದ ಅವರು ಮುಖ್ಯ ಭಾಷಣ ಮಾಡಿದರು. ಸೈಬರ್ ಭದ್ರತೆಯು ವೇಗವಾಗಿ ಬೆಳೆಯುತ್ತಿರುವ ಕ್ಷೇತ್ರವಾಗಿದ್ದು, ಇದರಲ್ಲಿ ಹೇರಳವಾದ ಅವಕಾಶಗಳಿವೆ ಎಂದು ಅವರು ತಿಳಿಸಿದರು. ನುರಿತ ವೃತ್ತಿಪರರಿಗೆ ಬೇಡಿಕೆ ಹೆಚ್ಚಿದ್ದರೂ, ಅನೇಕ ವಿದ್ಯಾರ್ಥಿಗಳಿಗೆ ಇನ್ನೂ ಪ್ರಾಯೋಗಿಕ ಜ್ಞಾನ ಮತ್ತು ಉದ್ಯಮದ ಸಿದ್ಧತೆಯ ಕೊರತೆಯಿದೆ ಎಂದು ಅವರು ನುಡಿದರು.

ಪಿಡಿಎ ಕಾಲೇಜ್ ಆಫ್ ಇಂಜಿನಿಯರಿಂಗ್‌ನ ಪ್ರಾಂಶುಪಾಲ ಡಾ. ಎಸ್. ಆರ್. ಪಾಟೀಲ್ ಅವರು ಅಧ್ಯಕ್ಷೀಯ ಭಾಷಣ ಮಾಡಿದರು.

ಡಾ. ಅನುರಾಧ' ಅವರು ವಂದನಾರ್ಪಣೆ ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

ಕಾರ್ಯಕ್ರಮದಲ್ಲಿ ಉಪಪ್ರಚಾರದ ಡಾ. ಭಾರತಿ ಹರಸುರ್, ಡಾ. ಎಸ್.ಆರ್. ಹೊಟ್ಟಿ, ಪರೀಕ್ಷಾ ನ್ಯಾಯಾಂತ್ರಾಣ ಅಧಿಕಾರಿಗಳಾದ ಡಾ. ಶ್ರೀದೇವಿ ಸೋಮ, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಮುಖ್ಯಸ್ಥರಾದ ಡಾ. ಸುಜಾತ ತೆರದಾಳ್, ಪ್ರೋಫೆಸರ್ ಡಾ .ಅನುರಾಧಟಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು



# ಸರ್ಕಾರದ ಮೇಲೆ ಒತ್ತಡ ಹಾಕಿ ಕಾಲುವೆಗಳ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವೆ;ಎಂ.ವೈ.ಪಾಟೀಲ



ಅಫಜಲಪುರ.ಅ.29: ಸುಮಾರು 400 ಕೋಟಿ ವೆಚ್ಚದಲ್ಲಿ 75 ಸಾವಿರ ಹೆಕ್ಟೇರ್ ಪ್ರದೇಶ ಬಂದರವಾಡ ಕೆರೆಯ ಮೂಲಕ ನೀರಾವರಿ ಮಾಡುವ ಉದ್ದೇಶದಿಂದ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಶೀಘ್ರವೇ ಸರ್ಕಾರ ಮಂಜೂರಾತಿ ನೀಡಿ, ಈ ಭಾಗದ ಸಮಗ್ರ ನೀರಾವರಿ ಪ್ರದೇಶವಾಗಲು ಸಹಕಾರಿಯಾಗಲಿದೆ ಎಂದು ಶಾಸಕ ಎಂ.ವೈ.ಪಾಟೀಲ್ ತಿಳಿಸಿದರು.

ಸರ್ಕಾರದ ಮೇಲೆ ಒತ್ತಡ ಹಾಕಿ ಕಾಲುವೆಗಳ ನಿರ್ಮಾಣಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವೆ ; ಎಂ.ವೈ.ಪಾಟೀಲ ತಾಲೂಕಿನ ಸೊನ್ನ ಬ್ಯಾರೇಜ್ ಬಳಿ ಬಾಗಿನ ಅರ್ಪಣೆ ಮಾಡಿ ಮಾತನಾಡಿದ ಅವರು, ನಮ್ಮ ಜೀವನಾಡಿ ತುಂಬಿ ಹರಿಯುತ್ತಿದ್ದು, ಭೀಮಾ ಬ್ಯಾರೇಜ್ ಮೂಲಕ ಅನೇಕ ಹಳ್ಳಿಗಳಿಗೆ ನೀರು ಸರಬರಾಜು ಆಗುತ್ತಿದೆ. ಅಲ್ಲದೇ 60 ಸಾವಿರ ಹೇಕ್ಟರ್ ನೀರಾವರಿಗೆ ನೀರು ಪೂರೈಸಬೇಕಾದರೆ ಇನ್ನೂ ಅನೇಕ ಕಾಲುವೆಗಳು ನಿರ್ಮಾಣ ಮಾಡುವ ಅವಶ್ಯಕತೆ ಇದೆ. ಹೀಗಾಗಿ ಸರ್ಕಾರದ ಮೇಲೆ ಒತ್ತಡ ಹಾಕಿ ಅನುದಾನ ಒದಗಿಸಿ ಕಾಲುವೆಗಳ ನಿರ್ಮಾಣಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ಪಾಟೀಲ ತಿಳಿಸಿದರು.

ಸಾನ್ನಿಧ್ಯ ವಹಿಸಿದ್ದ ಶ್ರೀವಿಶ್ವರಾಧ್ಯ ಮಳೇಂದ್ರ ಶಿವಾಚಾರ್ಯರು ಆಶೀರ್ವಚನ ನೀಡಿ, ಇಡೀ ದೇಶವೇ ಅಭಿವೃದ್ಧಿ ಹೊಂದಬೇಕಾದರೆ ನೀರಾ ವರಿಯಿಂದ ಮಾತ್ರ ಸಾಧ್ಯವಾಗಿದೆ. ಗ್ಯಾರಂಟಿ ಯೋಜನೆಗಳು ನಡುವೆಯೂ ಮುಖ್ಯಮಂತ್ರಿಗಳ ಮೇಲೆ ಒತ್ತಡ ಹಾಕಿ ಅಫಜಲಪುರ ಮತಕ್ಷೇತ್ರದ ಅಭಿವೃದ್ಧಿಗಾಗಿ ಶಾಸಕ ಎಂ.ವೈ.ಪಾಟೀಲ್‌ರು ಸಾವಿರಾರು ಕೋಟಿ ಅನುದಾನ ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತಿರುವುದು ಶ್ಲಾಘನೀಯವಾದದ್ದು. ಭೀಮಾ ಏತ ನೀರಾವರಿ ನಿಗಮದ ಎಎ ಸಂತೋಷ ಸಜ್ಜನ್ ಮಾತನಾಡಿ, ಕಳೆದ 10 ವರ್ಷಗಳ ನಂತರ ಮೊದಲ ಬಾರಿಗೆ ಭೀಮಾ ನದಿಗೆ ಅಪಾರ ಪ್ರಮಾಣದಲ್ಲಿ ನೀರು ಬಂದಿದ್ದು,ಹೀಗಾಗಿ ರೈತರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಪ್ರಕಾಶ್ ಜಮಾದಾರ, ಮಾಜಿ ಜಿ.ಪಂ. ಸದಸ್ಯರಾದ ಸಿದ್ಧಾರ್ಥ್ ಬಸರಿಗಿಡ, ಎಇಇ ಲಕ್ಷ್ಮಿಕಾಂತ್ ಬಿರಾದಾರ, ರಮೇಶ್ ಪೂಜಾರಿ, ಶಿವಾನಂದ ಗಾಡಿ ಸಾಹುಕಾರ, ಶರಣು ಕುಂಬಾರ, ಭೀಮರಾವ್ ಗೌರ, ರಾಜಕುಮಾರ ಬಬಲಾದ, ಅಣವೀರ ಮಠಪತಿ,ಅಂಬರೀಶ್ ಬುರಲಿ, ಪ್ರವೀಣ ಕಲ್ಲೂರ, ಮಾಜೀದ ಪಟೇಲ್, ಸುಧಾಕರ ಎಸ್.ಕೆ, ಸೇರಿದಂತೆ ಇತರರು ಉಪಸ್ಥಿತರಿದ್ದರು. ನೀರಾವರಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಶಾಸಕ ಎಂ.ವೈ.ಪಾಟೀಲ್ ನೀರಾವರಿ ಕ್ರಾಂತಿ ಮಾಡುತ್ತಿದ್ದಾರೆ.

ಸೊನ್ನ ಬ್ಯಾರೇಜ್ ನಿಂದ ಕೈಗಾರಿಕೆ, ನೀರಾವರಿ, ಕುಡಿಯುವ ಯೋಜನೆ ಹೀಗೆ ಮೂರು ಉದ್ದೇಶದಿಂದ ಈ ಬ್ಯಾರೇಜ್ ನಿರ್ಮಾಣ ಮಾಡಲಾಗಿದ್ದು, ಮಹಾರಾಷ್ಟ್ರದಲ್ಲಿ ಅಪಾರ ಪ್ರಮಾಣದಲ್ಲಿ ಮಳೆ ಬಂದಿದ್ದರಿಂದ ಪ್ರವಾಹ ಸೃಷ್ಟಿಯಾಗಿ ಸಾಕಷ್ಟು ಪ್ರಮಾಣದಲ್ಲಿ ಬೆಳೆಗಳು ಹಾಳಾಗಿವೆ, ಸರ್ಕಾರವು ಸಹ ರೈತರಿಗೆ ಪರಿಹಾರ ಘೋಷಣೆ ಮಾಡಿದೆ ಎಂದರು.

# ವಸತಿ ನಿಲಯಕ್ಕೆ ರಸ್ತೆ–ಬೀದಿ ದೀಪ ಬೇಡಿಕೆ:ತಾಲೂಕು ಆಡಳಿತಸೌಧ ಮುಂದೆ ವಿದ್ಯಾರ್ಥಿಗಳ ಪ್ರತಿಭಟನೆ

ಆಳಂದ:ಅ.29:ಪಟ್ಟಣದ ಭೀಮನಗರ ಹೊರವಲಯದಲ್ಲಿರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಮೆಟ್ರಿಕ್ ನಂತರದ ಡಾ. ಬಿ.ಆರ್. ಅಂಬೇಡ್ಕರ್ ವಸತಿ ನಿಲಯ ವಿದ್ಯಾರ್ಥಿಗಳು ಸೋಮವಾರ ತಾಲೂಕು ಆಡಳಿತಸೌಧದ ಎದುರು ತಮ್ಮ ಬೇಡಿಕೆಗೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.

ಕಳೆದ ಮೂರು ವರ್ಷಗಳಿಂದಲೂ ವಸತಿ ನಿಲಯಕ್ಕೆ ಹೋಗುವ ರಸ್ತೆಯ ಅಭಾವ ಹಾಗೂ ಬೀದಿ ದೀಪಗಳ ಕೊರತೆಯಿಂದಾಗಿ ತೊಂದರೆ ಅನುಭವಿಸುತ್ತಿದ್ದರೂ ಸಂಬಂಧಿತ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದಕ್ಕೆ ವಿದ್ಯಾರ್ಥಿಗಳು ಆಕ್ರೋಶ ವ್ಯಕ್ತಪಡಿಸಿದರು.

ನಿರ್ಜನ ಪ್ರದೇಶದಲ್ಲಿ ನಿರ್ಮಿಸಲಾದ ಈ ವಸತಿ ನಿಲಯದಲ್ಲಿ 200ಕ್ಕೂ ಹೆಚ್ಚು ಬಡ ಹಾಗೂ ಹಿಂದುಳಿದ ವರ್ಗದ ವಿದ್ಯಾರ್ಥಿಗಳು ವಾಸವಿದ್ದು, ಶಿಕ್ಷಣ ಪಡೆಯುತ್ತಿದ್ದಾರೆ. ಆದರೆ, ವಸತಿ ನಿಲಯಕ್ಕೆ ಹೋಗುವ ರಸ್ತೆಯು ಸಂಪೂರ್ಣ ಅಸಮರ್ಪಕವಾಗಿದ್ದು, ಮಳೆ ಬಂದಾಗ ನೀರು ತುಂಬಿ ಸಂಚಾರವೇ ಅಸಾಧ್ಯವಾಗುತ್ತದೆ. ರಾತ್ರಿ ವೇಳೆಯಲ್ಲಿ ಬೀದಿ ದೀಪಗಳ ಕೊರತೆಯಿಂದ ವಿದ್ಯಾರ್ಥಿಗಳು ಭಯದಿಂದ ಹೊರಗೆ ಬರುವಂತಿಲ್ಲ.

ಹಾವು, ಚೇಳುಗಳ ಭೀತಿಯಿಂದ ನಿದ್ರೆಯೂ ಕಳೆದುಕೊಳ್ಳುವಂತಾಗಿದೆ ಎಂದು ಪ್ರತಿಭಟನಾಕಾರ ವಿದ್ಯಾರ್ಥಿಗಳು ಅಸಮಾಧಾನ ವ್ಯಕ್ತಪಡಿಸಿದರು.

ವಿದ್ಯಾರ್ಥಿಗಳು ಕಳೆದ ಹಲವು ಬಾರಿ ಸಮಾಜ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಹಾಗೂ ತಾಲೂಕು ಆಡಳಿತಕ್ಕೆ ಮನವಿ ಸಲ್ಲಿಸಿದ್ದರೂ ಯಾವುದೇ ಸ್ಪಂದನೆ ದೊರೆತಿಲ್ಲವೆಂದು ಆರೋಪಿಸಿದರು.

"ಬಡ ವಿದ್ಯಾರ್ಥಿಗಳಿಗೆ ಸರ್ಕಾರದ ಆಶ್ರಯದಲ್ಲಿ ಶಿಕ್ಷಣ ನೀಡಲಾಗುತ್ತಿದೆ, ಆದರೆ ಮೂಲಭೂತ ಸೌಕರ್ಯಗಳ ಕೊರತೆಯಿಂದ ದಿನನಿತ್ಯವೂ ತೊಂದರೆ ಅನುಭವಿಸುತ್ತಿದ್ದೇವೆ. ವಸತಿ ನಿಲಯದ ಸುರಕ್ಷತೆ ಹಾಗೂ ಆರೋಗ್ಯ ಕಾಪಾಡಲು ರಸ್ತೆ ಮತ್ತು ದೀಪಗಳು ಅತ್ಯಗತ್ಯ," ಎಂದು ಪ್ರತಿಭಟನಾಕಾರ ವಿದ್ಯಾರ್ಥಿಗಳು ಒತ್ತಾಯಿಸಿದರು.

ತಾಲೂಕು ತಹಸೀಲ್ದಾರ ಅಣ್ಣಾರಾವ್ ಪಾಟೀಲ ಅವರು ಪ್ರತಿಭಟನಾಕಾರರ ಮನವಿಯನ್ನು ಸ್ವೀಕರಿಸಿ, ಸಮಸ್ಯೆ ಕುರಿತು ತಕ್ಷಣ ಕ್ರಮ ಕೈಗೊಳ್ಳುವ ಭರವಸೆ ನೀಡಿದರು.

"ಆದಷ್ಟು ಬೇಗ ರಸ್ತೆ ಮತ್ತು ಬೀದಿ ದೀಪ ಅಳವಡಿಕೆಗೆ ಸಂಬಂಧಿತ ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತದೆ," ಎಂದು ಅವರು ತಿಳಿಸಿದರು. ಈ ಭರವಸೆಯ ನಂತರ ಪ್ರತಿಭಟನೆ ಶಾಂತವಾಗಿ ಹಿಂತೆಗೆದುಕೊಳ್ಳಲಾಯಿತು.

ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಾದ ಭರತ, ಅನಿಲಕುಮಾರ, ನಿಖಿಲ, ಮಲ್ಲಿಕಾರ್ಜುನ, ಮೋಹನ್, ಮಹಾವೀರ, ಪ್ರದೀಪ, ನಾಗರಾಜ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಈ ಮೊದಲು ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ವಿಜಯಲಕ್ಷ್ಮೀ ಹೋಳ್ಕರ್ ಅವರಿಗೆ ಮನವಿ ಸಲ್ಲಿಸಿದ ವಿದ್ಯಾರ್ಥಿಗಳು ಮೂಲಸೌಲಭ್ಯಗಳು ರಸ್ತೆ ವಿದ್ಯುತ್ ದೀಪದಂತ ಸಮಸ್ಯೆಗಳಿಂದ ಬಳಲುವಂತಾಗಿದೆ ತಕ್ಷಣವೇ ಕ್ರಮ ಕೈಗೊಳ್ಳಬೇಕು ಎಂದು ಬೇಡಿಕೆಯ ಮನವಿ ಸಲ್ಲಿಸಿ ವಿದ್ಯಾರ್ಥಿಗಳು ಒತ್ತಾಯಿಸಿದರು.












# ಪ್ರಭಾಕರ ಬೆಳ್ಳಿ, ಸಂಪತಕುಮಾರಿ ಸೇವಾ ನಿವೃತ್ತಿ ಸಮಾರಂಭ



ಕಲಬುರಗಿ,ಅ.29: ನಗರದ ಸೇಂಟ್ ಮೇರಿ ಶಾಲೆ ಆವರಣಲ್ಲಿರುವ ಮದರ ಥೆರೆಸಾ ಕಮ್ಯೂನಿಟಿ ಹಾಲ್ ನಲ್ಲಿ ರವಿವಾರ ಚಿತ್ರಕಲಾ ಶಿಕ್ಷಕ ಪ್ರಭಾಕರ ಬೆಳ್ಳಿ ಹಾಗೂ ಸಹ ಶಿಕ್ಷಕಿ ಸಂಪತಕುಮಾರಿ ಅವರ ಸೇವಾ ವಯೋನಿವೃತ್ತಿ ಸಮಾರಂಭ ಯೋಜಿಸಲಾಗಿತ್ತು. ಜಿಲ್ಲೆಯ ಅಫಜಲಪೂರ ತಾಲ್ಲೂಕ ಆತನೂರ ಸರಕಾರಿ ಆದರ್ಶ ವಿದ್ಯಾಲಯ ( ಆರ್. ಎಂ. ಎಸ್ ಎ) ಚಿತ್ರಕಲಾ ಶಿಕ್ಷಕರಾದ ಪ್ರಭಾಕರ ಬೆಳ್ಳಿ, ಕಲಬುರಗಿ ನಗರದಲ್ಲಿರುವ ಸಂತ ಜೋಸೆಫ್ ಕನ್ನಡ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಸಹ ಶಿಕ್ಷಕಿ ಸಂಪತ್ತಕುಮಾರಿ ದಂಪತಿ ಸೇವಾ ನಿವೃತ್ತಿ ಹೊಂದಿರುವ ಪ್ರಯುಕ್ತ ಸನ್ಮಾನ ಹಾಗೂ ಬೀಳ್ಕೊಡುವ ಸಮಾರಂಭ ಅತ್ಯಂತ ವಿಜೃಂಭಣೆಯಿಂದ ಜರುಗಿತು.

ದಿವ್ಯ ಸಾನಿಧ್ಯ ವಹಿಸಿದ್ದ ಜಿಲ್ಲಾ ಮೇಲ್ವಿಚಾರಕರಾದ ಘನ ಜಾನ ಶಿಖಾಮಣಿ ಮತ್ತು ನಿವೃತ್ತ ಜಿಲ್ಲಾ ಮೇಲ್ವಿಚಾರಕರಾದ ಘನ ಸುಮಂತ. ಡಿ. ಸರಡಗಿ ರವರ ಪ್ರಾರ್ಥನೆ, ದೈವ ಸಂದೇಶ ಮತ್ತು ಆಶೀರ್ವಾದ ದೊಂದಿಗೆ ಮತ್ತು ಸ್ತುತಿ ಗೀತೆಗಳೊಂದಿಗೆ ಸಮಾರಂಭ ಪ್ರಾರಂಭಿಸಲಾಯಿತು.

ಹಿರಿಯ ಚಿತ್ರಕಲಾವಿದ ಡಾ.ವಿ.ಜಿ.ಅಂದಾನಿ ಸಮಾರಂಭ ಉದ್ಘಾಟಿಸಿದರು. ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ ನಮೋಶಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ನಿವೃತ್ತ ಉಪನಿರ್ದೇಶಕ ಶರಣಪ್ಪ ಕೋವಾಳಕರ್, ಚಿತ್ರ ಕಲಾವಿದ ಬಸವರಾಜ ಜಾನೆ, ಶಿಕ್ಷಣಾಧಿಕಾರಿ ಶಿವಗೊಂಡಪ್ಪ ಸಿದ್ದಣ ಗೋಳ , ಸಂಧ್ಯಾರಾಜ ಸ್ಯಾಮ್ಯುಯೆಲ್ ಕಾರ್ಯ ಕ್ರಮದ ಅಧ್ಯಕ್ಷತೆ ವಹಿಸಿದ್ದರು. ಬಸಣ್ಣ ಗೌಡ ಬಿರಾದಾರ ಮತ್ತು ಕಾರ್ಯ ಕ್ರಮದ ಕೇಂದ್ರ ಬಿಂದುಗಳಾಗಿರುವ ವಯೋ ಸಹಜ ನಿವೃತ್ತಿ ಹೊಂದಿರುವ ಪ್ರಭಾಕರ ಬೆಳ್ಳಿ ಮತ್ತು ಸಂಪತ್ತು ಕುಮಾರಿ ಅವರು ಜ್ಯೋತಿ ಬೆಳಗುವುದರ ಮೂಲಕ ಕಾರ್ಯ ಕ್ರಮಕ್ಕೆ ಚಾಲನೆ ನೀಡಿದರು. ಕ್ಷೇತ್ರ ಶಿಕ್ಷಣಾಧಿಕಾರಿ ಯುವರಾಜ್ ಗಾಡಿ , ಡಾ.ಪ್ರಕಾಶ ರಾಠೋಡ್, ಬಸವರಾಜ ಬಳ್ಳುಂಡಗಿ, ಜಿಲ್ಲಾಧ್ಯಕ್ಷ ಮಹೇಶ್ ಹೂಗಾರ್, ಜಿಲ್ಲಾಧ್ಯಕ್ಷ .ರಾಮಪ್ಪ ವಿ. ರಾಜ್ಯಾಧ್ಯಕ್ಷ ಟಿ.ಲಕ್ಷ್ಮೀ ನಾರಾಯಣ ಪ್ರಧಾನ ಕಾರ್ಯದರ್ಶಿ,. ಶಾಂತಕುಮಾರ್ ಜಂಟಿ ಕಾರ್ಯದರ್ಶಿ .ನಾಗೇಶಗೌಡ ಸಂಘಟನಾ ಕಾರ್ಯದರ್ಶಿ (ಚಿತ್ರಕಲೆ) ಶರಣಬಸಪ್ಪ ನಾಟಿಕರ್ ಮುಖ್ಯ ಗುರುಗಳು .ಪ್ರಕಾಶ ಎಸ್ ರಾಜರತ್ನ ಡಿ.ಕೆ. ವಾರ್ತಾ ಸಹಾಯಕರು ಹಾಗೂ ಶಾಲಾ ಸಿಬ್ಬಂದಿ ವರ್ಗದವರು, ಬೆಳ್ಳಿ ಪರಿವಾರದವರು ,ಬಂಧುಗಳು ಹಾಗೂ ಸ್ನೇಹಿತರು ಚಿತ್ರಕಲಾವಿದರು, ಚಿತ್ರಕಲಾ ಶಿಕ್ಷಕರು ಸಹಶಿಕ್ಷಕರು ಉಪಸ್ಥಿತರಿದ್ದರು. ಸಂಗಪ್ಪ ಸೇದಿ ಮನಿ ಕಾರ್ಯ ಕ್ರಮ ನಿರೂಪಿಸಿದರು.

# ಶಾಂತಿ ಸಭೆಯಲ್ಲಿ ತೀವ್ರ ವಾಗ್ವಾದ :ಮೊಟಕುಗೊಂಡ ಸಭೆ

ಕಲಬುರಗಿ,ಅ.29: ಆರ್‌ಎಸ್‌ಎಸ್ ಪಥಸಂಚಲನದ ಹಿನ್ನೆಲೆಯಲ್ಲಿ ಕಲಬುರ್ಗಿ–ಚಿತ್ತಾಪುರ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಶಾಂತಿ ಸಭೆಯು ವಿವಾದಗಳಿಗೆ ಕಾರಣವಾಗಿದ್ದು, ದಲಿತ ಸಂಘಟನೆಗಳು ಆರ್‌ಎಸ್‌ಎಸ್ ಮೇಲೆ ಸಮುದಾಯಗಳ ನಡುವೆ ಜಗಳ ಹುಟ್ಟುಹಾಕುವ ಪ್ರಯತ್ನ ನಡೆಸಿದೆಯೆಂದು ಟೀಕೆ ಮಾಡಿವೆ. ಸಭೆಯಲ್ಲಿ ಬಿಜೆಪಿ ಮುಖಂಡರು ಲಾಠಿ ಹಿಡಿದು ಪಥಸಂಚಲನ ಮಾಡುವುದಾಗಿ ಹೇಳಿದ್ದು, ದಲಿತ ಸಂಘಟನೆಗಳು ಇದನ್ನು ವಿರೋಧಿಸಿವೆ.

ಆರ್‌ಎಸ್‌ಎಸ್‌ನ ಪಥಸಂಚಲನವನ್ನು ಮುನ್ನಡೆಸಲು ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ಶಾಂತಿ ಸಭೆಯಲ್ಲಿ ದಲಿತ ಸಂಘಟನೆಗಳು ತಮ್ಮ ಅಭಿಪ್ರಾಯವನ್ನು ತಿಳಿಸಿದವು. ಅವರು,ಆರ್‌ಎಸ್‌ಎಸ್ ಸದಸ್ಯರು ಭಾರತದ ಧ್ವಜ ಮತ್ತು ಸಂವಿಧಾನದ ಪ್ರತಿಯನ್ನು ಹಿಡಿದು ಪಥಸಂಚಲನ ನಡೆಸಬೇಕೆಂದು ಕೋರಿದರು. ಆದರೆ,ಸಭೆಗೆ ಹಾಜರಿದ್ದ ಬಿಜೆಪಿ ಮುಖಂಡ ಅಂಬಾರಾಯ್ ಅಷ್ಟಗಿ ಲಾಠಿ ಹಿಡಿದು ಪಥಸಂಚಲನ ಮಾಡುವುದಾಗಿ ಹೇಳಿದ್ದು, ದಲಿತ ಸಂಘಟನೆಗಳ ಮುಖಂಡರು ಇದನ್ನು ವಿರೋಧಿಸಿದರು. ಇದರಿಂದಾಗಿ ಅಂಬಾರಾಯ್ ಅಷ್ಟಗಿ ಮತ್ತು ದಲಿತ ಸಂಘಟನೆಗಳ ಮುಖಂಡರ ನಡುವೆ ತೀವ್ರ ವಾಗ್ವಾದ ನಡೆಯಿತು. ದಲಿತ ಸಂಘಟನೆಗಳ ಮುಖಂಡರು, ಅಂಬಾರಾಯ ಅಷ್ಟಗಿ ಆರ್‌ಎಸ್‌ಎಸ್ ಸದಸ್ಯರಲ್ಲ. ಆದರೆ, ಅವರು ಸಭೆಗೆ ಬಂದು ವಾತಾವರಣವನ್ನು ಕೆಡಿಸಿದ್ದಾರೆ.

ಆರ್‌ಎಸ್‌ಎಸ್ ದಲಿತರು ಮತ್ತು ಇತರರ ನಡುವೆ ಜಗಳ ಹುಟ್ಟುಹಾಕುವ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದರು.

ಮತ್ತೊಂದೆಡೆ, ಬಿಜೆಪಿ ಮುಖಂಡ ಅಂಬಾರಾಯ್ ಅಷ್ಟಗಿ, ನಾವು ಲಾಠಿ ಹಿಡಿದು ಪಥಸಂಚಲನ ಮಾಡುವುದು ಸಂಪ್ರದಾಯವಾಗಿದೆ. ಇದರಲ್ಲಿ ಯಾವುದೇ ತಪ್ಪಿಲ್ಲ. ದಲಿತ ಸಂಘಟನೆಗಳು ಅನಗತ್ಯ ವಿವಾದ ಸೃಷ್ಟಿ ಮಾಡುತ್ತಿವೆ ಎಂದು ವಿವರಣೆ ನೀಡಿದರು.

ಜಿಲ್ಲಾಧಿಕಾರಿ ಸಭೆಯಲ್ಲಿ ಉಂಟಾದ ವಿವಾದವನ್ನು ನಿಭಾಯಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು. ಆದರೆ, ಈ ಘಟನೆಯಿಂದ ಆರ್‌ಎಸ್‌ಎಸ್ ಪಥಸಂಚಲನವನ್ನು ಮುನ್ನಡೆಸಲು ಸಮುದಾಯಗಳ ನಡುವೆ ಒಮ್ಮತವನ್ನು ಸಾಧಿಸುವುದು ಕಷ್ಟಕರವಾಗುವ ಸಾಧ್ಯತೆ ಇದೆ ಎಂದು ಊಹಿಸಲಾಗಿದೆ.



# ಅರ್ಥಪೂರ್ಣವಾಗಿ ರಾಜ್ಯೋತ್ಸವ ಆಚರಿಸೋಣ

ಜೇವರ್ಗಿ:ಅ.29: ಪ್ರತಿ ವರ್ಷದಂತೆ ಈ ಈ ವರ್ಷವೂ ಕೂಡ ಅದ್ದೂರಿ ಯಾಗಿ ಕನ್ನಡ ರಾಜ್ಯೋತ್ಸ ತಾಲೂಕಿನಾದ್ಯಂತ ಆಚರಿಸ ಲಾಗುವುದು. ಈ ಬಾರಿ ಕನ್ನಡ ಪರ ಸಂಘಟನೆಗಳ ಬೇಡಿಕೆಯಂತೆ ವಿಭಿನ್ನವಾಗಿ ಹಾಗೂ ಅರ್ಥಪುರ್ಣವಾಗಿ ರಾಜ್ಯೋತ್ಸವವನ್ನು ಆಚರಿ ಸೋಣ ಎಂದು ದಂಡಾಧೀ ಕಾರಿ ಮಲ್ಲಣ್ಣ ತಾಲೂಕ ಯಲಗೋಡ ಹೇಳಿದರು.



ಪಟ್ಟಣದ ಮಿನಿ ವಿಧಾನಸೌಧ ಆವರಣದಲ್ಲಿ ಕನ್ನಡ ರಾಜ್ಯೋತ್ಸವ ಆಚರಣೆಯ ಕುರಿತು ಕರೆದಿದ್ದ ಪೂರ್ವ ಭಾವಿ ಸಭೆಯನ್ನುದ್ದೆಶಿಸಿ ತಾಲೂಕ ದಂಡಾಧಿಕಾರಿ ಮಾತನಾಡಿದ ಅವರು, ತಾಲೂಕಿನಲ್ಲಿ ಈ ಬಾರಿ ಕನ್ನಡ ರಾಜ್ಯೋತ್ಸವವನ್ನು ವಿಭಿನ್ನವಾಗಿ ಆಚರಸಿಲು ಎಲ್ಲಾ ಕನ್ನಡ ಪರ ಸಂಘಟನೆಗಳ ಮು ಖಂಡರು ಸಲಹೆಗಳನ್ನ ನೀಡಲಾಗಿದ್ದು

ಅದರಂತೆ ಈ ಬಾರಿ ವಿಭಿನ್ನವಾಗಿ ಆಚರಿ ಸಲು ಪ್ರಯತ್ನಿಸುತ್ತೇವೆ. ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ತಾಲೂಕಿನ ಎಲ್ಲರೂ ಒಗ್ಗೂಡಿ ಸಂಭ್ರಮ ಸಡಗರದಿಂದ ಆಚರಿಸೋಣ. ಕನ್ನಡದ ಬಗ್ಗೆ ಯುವಪಿಳಿಗೆಗೆ ತಿಳಿಸುವುದು ಬಹಳ ಅವಶ್ಯವಾಗಿದೆ. ಈ ನಿಟ್ಟಿಲ್ಲಿ ಕಾರ್ಯಕ್ರಮವನ್ನು ಒಂದು ಅರ್ಥಪೂರ್ಣವಾಗಿ ಆಚರಿಸೋಣ ಎಂದರು. ಮುಖ್ಯಧಿಕಾರಿ ಶಂಭುಲಿಂಗ ದೇಸಾಯಿ

ಮಾತನಾಡಿ, ಕನ್ನಡ ಪರ ಹೋರಾಟಗಾರರು ಈ ಕಾರ್ಯಕ್ರಮದ ಕೇಂದ್ರಬಿಂದುಗಳಂತೆ. ಅವರ ಸಹಾಯ ಸಹಕಾರ ಈ ಕಾರ್ಯಕ್ರಮಕ್ಕೆ ಅವಶ್ಯವಿದೆ.

ತಾಲೂಕಿನ ಎಲ್ಲರೂ ಕೂಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಬಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ಈ ಸಂದರ್ಭದಲ್ಲಿ ಅಧಿಕಾರಿಗಳಾದ ಶಂಭುಲಿಂಗ ದೇಸಾಯಿ, ರವಿಚಂದ್ರ ರೆಡ್ಡಿ, ಸತಿಷ ಸಾಂಗನ್, ಹುಲಿಕಂತರಾಯ ಸುಂಬುಡ್, ಉಮೇಶ ಶರ್ಮಾ, ಶೋಭಾ ಸಜ್ಜನ, ಬಸಮ್ಮ, ಸಂತೋಷ ಭಾರತೀಯ ದಲಿತ ಪ್ಯಾಂಥರ ವಿಭಾಗೀ ಯ ಅಧ್ಯಕ್ಷ, ಭಿಮರಾಯ ನಗನೂರ ಕ ಸಾ ಪ ತಾಲೂಕು ಅಧ್ಯಕ್ಷ, ಎಸ್ ಕೆ ಬಿರಾದಾರ ಜಯ ಕರ್ನಾಟಕ ತಾಲೂಕು ಅಧ್ಯಕ್ಷ, ಭಿಮಾಶಮಕರ ಬಿಲ್ವಾಡ ವಿಷ್ಣು ಸೇನಾ ತಾಲೂಕು ಅಧ್ಯಕ್ಷ, ಬಸವರಾಜ ಬಾಗೇವಾಡಿ, ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾದ ಕಾಶಿನಾಥ ಮಂದೆವಾಲ ಕ ಸಾ ಪ ಗೌರವ ಕಾ , ಶ್ರೀಹರಿ ಕರಕಳ್ಳಿ ಭಾರತೀ ಯ ದಲಿತ ಪ್ಯಾಂಥರ್ ಜಿಲ್ಲಾ ಖಜಾಂಚಿ, ರವಿ ಕುಳಗೇರಿ, ದಲಿತ ಮುಖಂಡರಾದ ಕ ಸಾ ಪ ಪರಿಶಿಷ್ಟ ಜಾತಿ ಪ್ರತಿನಿಧಿ ಸಿದ್ದು ಕೇರೂರ, ಕ ಸಾ ಪ ನಗರ ಘಟಕ ಅಧ್ಯಕ್ಷ ಬಂಗರೆಪ್ಪ ಆಡಿನ ಕೊಳಕೂರ ಜಯ ಕರ್ನಾಟಕ ಮುಖಂಡರಾದ, ಸಿದ್ದಣ್ಣಗೌಡ ಮಾವೂನೂರ, ಮುನೀರ ಪಾಶ್ ಕಳ್ಳಿ,ಜಯ ಕರ್ನಾಟಕ ಮುಖಂಡರಾದ ಮಾಂತಶ ಹಾದಿಮನಿ, ನಮ್ಮ ಕರ್ನಾಟಕ ಸೇನೆ ತಾಲೂಕು ಅಧ್ಯಕ್ಷ ಶಿವಲಿಂಗ ಹಳ್ಳಿ ಕರವೇ ತಾಲೂಕು ಅಧ್ಯಕ್ಷ, ರಾಜು ಭಂಟನೂರ ದಲಿತ ಮುಖಂಡರಾದ, ಯಶವಂತ ಬಡಿಗೇರ ಮಂದೆವಾಲ ಜೈ ಕರವೇ ತಾಲೂಕು ಅಧ್ಯಕ್ಷ, ಶರಬು ಕಲ್ಯಾಣಿ, ಸಾಯಬಣ್ಣ ಕಲ್ಯಾಣಕರ್, ದಶರತ, ಶ್ರೀಶೈಲ ಪೂಜಾರಿ,ದಲಿತ ಮುಖಂಡರಾದ ಗುಂಡಪ್ಪ ಜಡಗಿ ಸೇರಿದಂತೆ ಅನೇಕರಿದ್ದರು.

# ಆರ್. ಆರ್. ಬಿರಾದಾರ ಅವರಿಗೆ ಉತ್ತಮ ಶಿಕ್ಷಕ ರತ್ನ ಪ್ರಶಸ್ತಿ ಪ್ರದಾನ

ಕಲಬುರಗಿ:ಅ.29: ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಸಚಿವರಾದ ಪ್ರೊ.ಆರ್. ಆರ್. ಬಿರಾದಾರ ಅವರಿಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಶಿಕ್ಷಣ ಸಂಸ್ಥೆಗಳ ನೌಕರರ ಸಂಘದ ವತಿಯಿಂದ 'ರಾಜ್ಯ ಮಟ್ಟದ ಉತ್ತಮ ಶಿಕ್ಷಕ ರತ್ನ' ಪ್ರಶಸ್ತಿಯನ್ನು ದಿನಾಂಕ 26/10/2025 ರಂದು ಬೆಂಗಳೂರಿನ ಕರ್ನಾಟಕ ಕಲಾ ಕಾಲೇಜಿನಲ್ಲಿ ಜರುಗಿದ ಸಮಾರಂಭದಲ್ಲಿ ಸನ್ಮಾನಿಸಿ ಈ ಪ್ರಶಸ್ತಿಯನ್ನು ನೀಡಿಗೌರವಿಸಲಾಗಿದೆ.

ಅವರು ಸಲ್ಲಿಸಿದ 25 ವರ್ಷಗಳ ಬೋಧನೆ, ಸಂಶೋಧನೆ ಮತ್ತು ಶೈಕ್ಷಣಿಕ ವಿಸ್ತರಣಾ ಕಾರ್ಯಕ್ರಮಗಳನ್ನು ಆಧರಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಇತ್ತೀಚೆಗೆ ಅವರಿಗೆ ಮಂಗಳೂರು ವಿಶ್ವವಿದ್ಯಾಲಯದಿಂದ ಎರಡನೇ ಪಿ.ಎಚ್ಚ್.ಡಿ ಪದವಿ ಪ್ರದಾನ ಮಾಡಲಾಯಿತು. ಪ್ರೊ.ಬಿರಾದಾರ ಅವರು ಉತ್ತಮ ಸಂಶೋಧಕರಾಗಿದ್ದು 4 ಪುಸ್ತಕಗಳು, 3 ಮನೋಗ್ರಾಫ್‌ಗಳು, 107ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಪ್ರತಿಷ್ಠಿತ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ್ದಾರೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ 120ಕ್ಕೂ ಹೆಚ್ಚು ಸಂಶೋಧನಾ ಲೇಖನಗಳನ್ನು ಮಂಡನೆಮಾಡಿದ್ದಾರೆ. ಪ್ರಸ್ತುತ ವಿದ್ಯಮಾನಗಳ ಕುರಿತಾಗಿ 70ಕ್ಕೂ ಹೆಚ್ಚು ಜನಪ್ರಿಯ ಲೇಖನಗಳು ದಿನಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. 13ಕ್ಕೂ ಹೆಚ್ಚು ಸಂಶೋಧನಾ ಪ್ರಾಜೆ??????? ಗಳನ್ನು ಅವರು ಪೂರ್ಣಗೊಳಿಸಿದ್ದಾರೆ. ಅದರಂತೆ ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ 150ಕ್ಕೂ ಹೆಚ್ಚು ವಿಶೇಷ ಮತ್ತು ಆಹ್ವಾನಿತ ಉಪನ್ಯಾಸಗಳನ್ನು ನೀಡಿದ್ದಾರೆ.

ಅವರಿಗೆ 2025 ರಲ್ಲಿ ಜೇವರ್ಗಿ ತಾಲೂಕಿನ ಕನ್ನಡ ಸಾಹಿತ್ಯ ಪರಿಷತ್‌ನಿಂದ 'ಕಲ್ಯಾಣ ಕರ್ನಾಟಕ ಕೌಟಿಲ್ಯ' ಪ್ರಶಸ್ತಿ, 2021ರಲ್ಲಿ ಬೆಂಗಳೂರಿನ ಐಎ??? ಬಿಆರ್ ಬಿಸಿನೆಸ್ ಸ್ಕೂಲ್‌ದಿಂದ 'ಗುರು ಶ್ರೇಷ್ಠ' ಪ್ರಶಸ್ತಿ, 2019ರಲ್ಲಿ ಇಂಡಿಯನ್ ಇಕನಾಮಿಕ್ ಅಸೋಸಿಯೇಷ???ದಿಂದ ಪ್ರೊ.ಟಿ.ಎಸ್. ಪಪೊ?ಲಾ ಮೆರಿಟ್ ಅವಾರ್ಡ್', 2018 ರಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ. ಎಸ್. ಟಿ. ನಂಡಿಬೇವೂರ್ 'ಅತ್ಯುತ್ತಮ ಸಂಶೋಧಕ ಸ್ವರ್ಣ ಪದಕ', 2008 ರಲ್ಲಿ ನವದೆಹಲಿಯ ರಾಷ್ಟ್ರೀಯ ಸಾರ್ವಜನಿಕ ಹಣಕಾಸು ಮತ್ತು ನೀತಿ ಸಂಸ್ಥೆ 'ದ್ವಿತೀಯ ಅತ್ಯುತ್ತಮ ಸಂಶೋಧನಾ ಪ್ರಶಸ್ತಿ, 2007ರಲ್ಲಿ ನವದೆಹಲಿ ಐಸಿಎಸ್‌ಎಸ್‌ಆರ್‌ದಿಂದ 'ಇಂಡೋ–ಚೈನಾ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮ', 2006ರಲ್ಲಿ ರತನ್ ಟಾಟಾ ಟ್ರಸ್ಟ್ ಸಹಯೋಗದಲ್ಲಿ ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯಿಂದ 'ಸರ್ ರತನ್ ಟಾಟಾ ವಿಜಿಟಿಂಗ್ ಫೆಲೋಶಿಪ್' ಮತ್ತು 2005ರಲ್ಲಿ ನವದೆಹಲಿಯ ಇಂಡಿಯನ್ ಸೊಸೈಟಿ ಆಫ್ ಲೇಬರ್ ಎಕನಾಮಿಕ್ಸ್‌ದಿಂದ ಸಂಜಯ್ ಠಾಕೂರ್ 'ಯಂಗ್ ಲೇಬರ್ ಎಕನಾಮಿಸ್ಟ್ ಅವಾರ್ಡ್' ಸೇರಿದಂತೆ ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಅವರ ಸಂಶೋಧನಾ ಕೊಡುಗೆಯನ್ನು ಗಮನಿಸಿ ಕರ್ನಾಟಕ ಸರ್ಕಾರವು 2020ರಿಂದ 2023ರ ಅವಧಿಯಲ್ಲಿ ಅವರ ಸಂಶೋಧನೆಯ ಅನುಭವದ ಉಪಯೋಗವನ್ನು ಪಡೆದುಕೊಳ್ಳಲು ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಸದಸ್ಯರಾಗಿ ನೇಮಕ ಮಾಡಲಾಗಿತ್ತು.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401